ಅಪರಂಜಿ

ಆಗಸ್ಟ್ 2002

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಕೃಷ್ಣ ಸುಬ್ಬರಾವ್

ಬೇಲೂರು ರಾಮಮೂರ್ತಿ

ಟಿ.ಎ. ಖುದ್ದೂಸ್

ಎಂ.ಎನ್.ಕೆ.

ಶಿವ್ರ

ಶ್ಯಾಮಲ ರವಿಶಂಕರ್

ಎಸ್ಸಾರ್ಮೂರ್ತಿ

ಬಿ. ನಾಗೇಂದ್ರ

ಹೆಚ್. ಗೋಪಾಲಕೃಷ್ಣ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ತಿ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:

ಬಿಡಿ ಪ್ರತಿ:	ರೂ. 5.00
ವಾರ್ಷಿಕ ಚಂದಾ:	ರೂ. 60
ಹತ್ತು ವರ್ಷದ ಚಂದಾ :	ರೂ. 500

Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 19 ಆಗಸ್ಟ್ - 2002 ಸಂಚಿಕೆ - 11

ಅಪರಂಜಿ ಕಿಡಿ	ಪ್ರಕಾಶ್	2
ನಮ್ಮ ನಿಮ್ಮಲ್ಲಿ	ಶಿವಕುಮಾರ್	4
ಬಿಡುಗಡೆಯ ಸುದ್ದಿ	ಕೃಷ್ಣ ಸುಬ್ಬರಾವ್	6
ಪಾಠ - ಮುಗಿಯಿತೇ...	ಬೇಲೂರು ರಾಮಮೂರ್ತಿ	8
ಮೂರರ ಮೈಮೆ	ಟಿ.ಎ. ಖುದ್ದೂಸ್	10
ಎಲ್ಲಾನೂ ಎರಡೆರಡೇ	ಎಂ.ಎಸ್.ಕೆ.	13
ಆಫ್ರಿಕನ್ ಆರ್ಗೋನಿಸಿ	ಶಿವು	17
ಟಕ್ಕರ್ ಸವಾರಿ	ಶ್ಯಾಮಲ ರವಿಶಂಕರ್	21
ಗುಂಡಾವತರಣ	ಎಸ್ಸಾರ್ಮೂರ್ತಿ	26
ಕಾಲಃ ಕ್ರೀಡತಿ...	ಜಿ. ನಾಗೇಂದ್ರ	32
ಮನೆಯಪೊಂದಜ್ಜಿ!	ಹೆಚ್. ಗೋಪಾಲಕೃಷ್ಣ	34

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಟೆಕ್ನೋ ಟೆಕ್, ಬೆಂಗಳೂರು 27



● ಪ್ರಕಾಶ್

ಪಿ.ಸಿ. ಅಲೆಗ್ಸಾಂಡರ್ ರಾಜೀನಾಮೆ
- ಸುದ್ದಿ

He did not Conquer ಅನ್ನಬಹುದೆ?!

★★★

ಸಮಾಜ ಘಾತುಕ ವ್ಯಕ್ತಿಗಳ ವಿರುದ್ಧ ಕ್ರಮ
- ಮಾನ್ಯ ಮುಖ್ಯಮಂತ್ರಿಗಳು

ಸೌಧದಿಂದ ಶುರು ಮಾಡಿದರೆ ಬಲು ಒಳ್ಳೆಯದು!!

★★★

ದೇವನ ಹಳ್ಳಿಯ ವಿಮಾನ ನಿಲ್ದಾಣ ಅಕ್ಟೋಬರ್‌ನಲ್ಲಿ ಆರಂಭ
- ಸುದ್ದಿ

ಸರಿ, ಯಾವ ವರ್ಷ??

★★★

'ನಿಗಮ ಮಂಡಳಿಗಳಿಗೆ ನಮ್ಮನ್ನೇ ನೇಮಿಸಿ ಸಾರ್'
- ಕಾಂಗ್ರೆಸ್ ಕಾರ್ಯಕರ್ತರು

ಇವರೆಲ್ಲ ದೇಶಸೇವೆಗಾಗಿ ಮುನ್ನುಗ್ಗುತ್ತಿರುವುದನ್ನು ಕಂಡು
ಅಪರಂಜಿ ಕೊಂಡಾಡಿದಳಂತೆ!!

★★★

ಪತ್ನಿಯನ್ನು ಹೊತ್ತುಕೊಂಡು Obstacle race
- ಫಿನ್ಲೆಂಡ್ ವರದಿ

ಇದನ್ನೇ ನಾವು ಮಾಡ್ತಾ ಇದೀವಲ್ಲ ದಿನಾ ಅಂತ ಕೋಳಿ ಕುಕ್ಕ
ಗಂಡಂದಿರು ಗೊಣಗಾಡಿದರಂತೆ!!

★★★

ವೈಕೋ ಬಂಧನ

- ಸುದ್ದಿ

ಭಸ್ಮಾಸುರನ ಕತೆ ಮರುಕಳಿಸಿದೆ!!

★★★

ಒಂದು ಪ್ರಗತಿಪರ ಐಡಿಯಾ

ಲೋಕಾಯುಕ್ತರ ಭಾವಚಿತ್ರವನ್ನು ಎಲ್ಲ ಸರ್ಕಾರಿ ಕಚೇರಿಗಳಲ್ಲೂ ಹಾಕಿದರೆ??

★★★

ರೊನಾಲ್ಡೋ; ಭಾರತ ನೋಡಲು ಇಚ್ಛೆ

- ಬ್ರೆಸಿಲ್ ಸುದ್ದಿ

ಸುದ್ದಿಯನ್ನು ಭಾರತದ ಬಾರ್ಬರ್‌ಗಳೆಲ್ಲ ಸಂತೋಷದಿಂದ ಕೇಳಿದರು!!


★★★

ಹಂಡ್ರೆಡ್ ಪರ್ಸೆಂಟ್ ಕನ್ನಡದಲ್ಲಿ ಮಾತಾಡಬೇಕು

- ಸದನ ಸುದ್ದಿ

ಟೀಕೆ ಹಂಡ್ರೆಡ್ ಪರ್ಸೆಂಟ್ ಅನಗತ್ಯ!!

★★★



ನಮ್ಮ ನಿಮ್ಮಲ್ಲಿ

ಮೊನ್ನೆ ಸಂಜೆ ನನ್ನ ತಮ್ಮ ಪ್ರಕಾಶ್ ನನ್ನನ್ನು ಒಂದು ಭಾಷಣಕ್ಕೆ ಕರೆದುಕೊಂಡುಹೋಗಿದ್ದ. ನಿಯಾಸ್ ನಲ್ಲಿ (ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್) ಏರ್ಪಡಿಸಿದ್ದ ಆ ಕಾರ್ಯಕ್ರಮದಲ್ಲಿ ನಾಡಿನ ಖ್ಯಾತ ಸೈಕ್ಯಾಟ್ರಿಸ್ಟ್ ರವಿ ಕಪೂರ್, ಭಾಷಣಕಾರರು. ಭಾಷಣದ ವಿಷಯ ''ದ ಐಡಿಯಾ ಆಫ್ ಗಾಡ್'' (ದೇವರು ಎಂಬ ಕಲ್ಪನೆ). ಲೀಲಕ್ಕ ಹಾಗೂ ಪ್ರಕಾಶನ ಮಗಳು ಶುಭಾ ಸಹ ನಮ್ಮೊಂದಿಗಿದ್ದರು. ಐದು ಘಂಟೆಯ ಭಾಷಣಕ್ಕೆ ನಾಲ್ಕೂವರೆಗಾಗಲೇ ಸುಮಾರು ಜನ ಸೇರಿದ್ದರು. ರೂಡಾ ನರಸಿಂಹರವರ ನಾಂದಿ ಭಾಷಣದ ನಂತರ ಮುಖ್ಯ ಭಾಷಣ ಪ್ರಾರಂಭವಾಯಿತು.

ಅಂದಿನ ಭಾಷಣದಲ್ಲಿ ದೇವರನ್ನು ಕುರಿತು ಮೂರು ಮುಖ್ಯ ಕವಲುಗಳನ್ನು ಕಪೂರ್ ಗುರುತಿಸಿದರು. ಮೊದಲನೆಯದಾಗಿ ಈ ವಿಶ್ವಸೃಷ್ಠಿಗೆ ಕಾರಣಕರ್ತನಾದ, ಎಲ್ಲ ಭೌತ ನಿಯಮಗಳ ಕರ್ತೃವಾದ ಡಿಸೈನರ್ ದೇವರು. ಶೂನ್ಯ ಸಂಪಾದನೆ ಮುಂತಾದ ಮಿಸ್ಟಿಕ್ ಅನುಭವಗಳಲ್ಲಿ ಕಾಣಿಸಿಕೊಳ್ಳುವ ಸಚ್ಚಿದಾನಂದ ಸ್ವರೂಪಿಯಾದ ದೇವರು. ನಮ್ಮ ಪ್ರತಿಯೊಂದು ಕಷ್ಟಗಳನ್ನೂ ಕಿವಿಯ ಮೇಲೆ ಹಾಕಿಕೊಂಡು ತನ್ನ ಕೈಲಾದಷ್ಟು ಮಾಡುವ ಆಪದ್ಬಾಂಧವ ದೇವರು. ಈ ಎಲ್ಲ ಕಲ್ಪನೆಗಳನ್ನು ಕುರಿತು ಸ್ಟೀಫನ್ ಹಾಕಿಂಗ್ ನಂತಹ ಖ್ಯಾತ ವಿಜ್ಞಾನಿಗಳ ಅನಿಸಿಕೆಗಳನ್ನು ಭಾಷಣಕಾರರು ಸಭಿಕರಿಗೆ ಪರಿಚಯಿಸಿದರು. ಮಿಸ್ಟಿಕ್ ಅನುಭವಗಳನ್ನು ಕುರಿತು ಮಾತನಾಡುತ್ತಾ ''ನಾನು ಹಿಂದೊಮ್ಮೆ ಪಾಂಡಿಚೆರಿಯಲ್ಲಿನ ಶ್ರೀ ಅರವಿಂದೋ ಆಶ್ರಮಕ್ಕೆ ಹಲವು ಸ್ನೇಹಿತರೊಂದಿಗೆ ಹೋಗಿದ್ದೆ. ಅಲ್ಲಿ ಸಮಾಧಿಯ ಬಳಿ ಕುಳಿತು ನಾನು ಧ್ಯಾನಮಗ್ನನಾದೆ. ಕಣ್ಣು ಬಿಟ್ಟಾಗ ಸುತ್ತಲಿನ ತನ್ನ ಗೆಳೆಯರ ಮುಖಗಳಲ್ಲಿ ಆತಂಕ ಸ್ಪಷ್ಟವಾಗಿ ಕಾಣುತ್ತಿತ್ತು. ಒಬ್ಬ ನಿಟ್ಟುಸಿರು ಬಿಟ್ಟು ''ಸಧ್ಯ, ಹೊರಕ್ಕೆ ಬಂದೆಯಲ್ಲಾ'' ಅಂದ. ನಾನು ''ಏಕೆ? ಏನು ಸಮಾಚಾರ?'' ಎಂದು ಕೇಳಿದೆ. ಅದಕ್ಕೆ ಉತ್ತರವಾಗಿ ''ನೀನು ಕಳೆದ ಮೂರು ಘಂಟೆಗಳಿಂದ ಭಾವಸಮಾಧಿಯಲ್ಲಿದ್ದೆ. ಹೊರಗೆ ಬರುತ್ತೀಯೋ ಇಲ್ಲವೋ ಎಂಬ ಆತಂಕ ನಮ್ಮನ್ನು ಕಾಡುತ್ತಿತ್ತು.'' ಎಂದು ಆತ ಹೇಳಿದ ಎಂದು ಕಪೂರ್ ತಮ್ಮ ಸ್ವಂತ ಅನುಭವವನ್ನು ನಮ್ಮೊಂದಿಗೆ ಹಂಚಿಕೊಂಡರು. ಸಭಿಕರಲ್ಲಿ ಒಬ್ಬ ಎದ್ದುನಿಂತು ''ಆ ಸ್ಥಿತಿಯಲ್ಲಿ ನಿಮ್ಮ ಅನುಭವ ಏನಾಗಿತ್ತು ಎಂದು ಕೇಳಬಹುದೇ?'' ಎಂದು ಸಂಕೋಚದಿಂದಲೇ ಕೇಳಿದ. ''ನನ್ನ ಮನಸ್ಸು ಅತ್ಯಂತ ಸಂತೋಷದಿಂದ ತುಂಬಿತ್ತು ಎನ್ನುವುದನ್ನು ಬಿಟ್ಟು ಹೆಚ್ಚಿಗೆ ಏನೂ ಹೇಳಲಾರೆ'' ಅಂದರು.

ಭಾಷಣ ವಿದ್ವತ್ಪೂರ್ಣವಾಗಿದ್ದರೂ ಸರಳವಾಗಿತ್ತು. ಪ್ರಶ್ನೋತ್ತರಗಳು ನಾವು ಊಹಿಸಿದಂತೆ ತಮಾಷೆಯಾಗಿದ್ದವು. ''ರಾಮಾಯಣ ಮಹಾಭಾರತ ನಿಜವಾಗಿ ನಡೆದದ್ದೇ?'', ''ದೇವರು ಎಂದೊಡನೇ ಎಲ್ಲರೂ ಪುಲ್ಲಿಂಗವನ್ನೇ ಬಳಸುತ್ತಾರಲ್ಲಾ ಏಕೆ?'' ಎಂದು ಮುಂತಾದ ಪ್ರಶ್ನೆಗಳು ಸಭೆಗೆ ಕಾಮಿಕ್ ರಿಲೀಫ್ ತರುವುದರಲ್ಲಿ ಯಶಸ್ವಿಯಾದವು. ಭಾಷಣ ಮುಗಿಸಿಕೊಂಡು ಹೊರಕ್ಕೆ ಬರುತ್ತಾ ನಮ್ಮ ನಮ್ಮಲ್ಲೇ ಚರ್ಚೆ ಶುರು ಆಯಿತು. ಪ್ರಕಾಶ ಎಲ್ಲವನ್ನೂ ಸಮ್ಮರೈಸ್ ಮಾಡುವ ಧಾಟಿಯಲ್ಲಿ ''ದೇವರು Anxietylytic. ಅಂದರೆ ನಮ್ಮ ಆತಂಕಗಳನ್ನು ಕಡಿಮೆ ಮಾಡಿಕೊಳ್ಳಲು ಆತ ಸಹಾಯಕ. ಎರಡನೆಯದಾಗಿ ಆತನಿಗೆ ಒಂದು Punitive role ಇದೆ. ಆದರಿಂದಲೇ ಜನ ಭಯಭಕ್ತಿಗಳಿಂದ ಸರಿಯಾದ ದಾರಿಯಲ್ಲಿ ನಡೆಯಲು ಪ್ರಯತ್ನಿಸುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಆತ್ಮಜ್ಞಾನದಂತಹ ಸಾಧನೆಗಳನ್ನು ಮಾಡಿರುವ ಮಹಾತ್ಮರು ತಮ್ಮ ದೈಹಿಕ ಭಾದೆಗಳ ಕಟ್ಟುಪಾಡನ್ನು ದಾಟಿ ಸಮಾಜದ ಹಿತಕ್ಕಾಗಿ, ನೆಮ್ಮದಿಗಾಗಿ ಶ್ರಮಿಸುವುದಕ್ಕೆ ಕಾರಣರೂಪನಾದ ಮಹತ್ಶಕ್ತಿ'' ಎಂದು ಹೇಳಿದ. ಎಂದಿನಂತೆ ಪ್ರಕಾಶನದೇ ಕೊನೆಯ ಮಾತಾದ್ದರಿಂದ ಮಿಕ್ಕ ನಾವು ಏನೂ ಹೇಳಲಿಲ್ಲ.

ನಿಯಾಸ್ ಇರುವುದು ಇಂಡಿಯನ್ ಇನ್ಸ್ಟಿಟ್ಯೂಟ್ ಕ್ಯಾಂಪಸ್ಸಿನಲ್ಲಿ. ನಾನೂ ನನ್ನ ಪತ್ನಿ ಮಂಗಳೆ ಇಲ್ಲಿ ಸಂಜೆ ವಾಕ್ ಮಾಡುವುದು ರೂಢಿ. ಹಾಗಾಗಿ ಅವಳಿಗೆ ಸಂಜೆ ಇನ್ಸ್ಟಿಟ್ಯೂಟಿಗೆ ಬರಲು ಹೇಳಿದ್ದೆ. ಪ್ರಕಾಶ ನನ್ನನ್ನು ತನ್ನ ಕಾರಿನಲ್ಲಿ IIScಯ ಮುಖ್ಯ ಕಟ್ಟಡದವರೆಗೂ ಬಿಡುತ್ತೇನೆಂದು ಹೇಳಿ ಕೂರಿಸಿಕೊಂಡ. ಸ್ವಲ್ಪದೂರ ಹೋಗುವಷ್ಟರಲ್ಲಿ ಮಂಗಳೆ ನಡೆದು ಬರುತ್ತಿರುವುದು ಕಾಣಿಸಿತು. ನಾನು ಪ್ರಕಾಶನತ್ತ ತಿರುಗಿ ''ಇಲ್ಲಿ ನಿಲ್ಲಿಸಬೇಡ. ಇನ್ನೂ ಮುಂದೆ ಹೋಗು'' ಅಂದೆ. ತಕ್ಷಣ ಲೀಲಕ್ಕ ಬಾಯಿಹಾಕಿ ''ಚೆನ್ನಾಯ್ತು. ಇಷ್ಟು ಹೊತ್ತೂ ದೇವರು ದಿಂಡ್ರು ಅಂತೆಲ್ಲಾ ಮಾತನಾಡಿ ಈಗ ನೋಡೇ ಶುಭಾ, ಹೆಂಡ್ತಿ ಕಂಡ ತಕ್ಷಣ ದೂರ ಹೋಗು ಅಂತಾನಲ್ಲಾ ಈ ದುರ್ಮಾರ್ಗ'' ಅಂತ ಛೇಡಿಸಿದಳು. ಪ್ರಕಾಶ ನನ್ನ ನೆರವಿಗೆ ಬಂದ.

''ಹಾಗಲ್ಲ ಲೀಲಕ್ಕಾ, ಕುಮಾರ್ ಬೇಗ ಬೇಗ ನಡೀತಾನೆ. ಮಂಗಳೆಯೋ ಗಜಗಮನೆ. ಬಲು ನಿಧಾನದ ನಡೆದಾಟ. ಹಾಗಾಗಿ ಇವನೇ ಒಂದು ದಾರೀಲಿ ನಡೀತಾನೆ. ಅವಳದ್ದೇ ಒಂದು ದಾರಿ. ಕೊನೇಗೆ ಹಿಂದೀ ಸಿನಿಮಾದಲ್ಲಿ ಆಗೋಹಾಗೆ ಕಾರಿನ ಹತ್ತಿರ ಇವರಿಬ್ಬರೂ ಭೇಟಿ ಮಾಡ್ತಾರೆ. ಬಿಟ್ಟಿ ಸಿಕ್ಕಿದಾ ಅಂತ ಸುಮ್ಮಸುಮ್ಮನೇ ರೇಗಿಸಬಾರ್ದು'' ಅಂದ ಪ್ರಕಾಶ. ಅಷ್ಟು ಹೊತ್ತಿಗೆ ನನ್ನ ಸ್ಟಾಪ್ ಬಂದಿತ್ತು. ಎಲ್ಲರಿಗೂ ವಿದಾಯ ಹೇಳಿ ಕಾರಿನಿಂದ ಇಳಿದೆ.

– *ಶಿವಕುಮಾರ್*

ಬಿಡುಗಡೆಯ ಸುದ್ದಿ

• *ಕೃಷ್ಣ ಸುಬ್ಬರಾವ್*

ಗ್ರಂಥ ಬಿಡುಗಡೆ ಸಮಾರಂಭಗಳು ಒಂದು ಪ್ರಚಾರದ ಪ್ರಕ್ರಿಯೆ. ಎಷ್ಟೋ ಇಂತಹ ಸಮಾರಂಭಗಳನ್ನು ನೋಡಿದ್ದ ನನಗೆ ಜುಲೈ 3 ರಂದು ಭಾರತೀಯ ವಿದ್ಯಾಭವನದಲ್ಲಿ ನಡೆದ 'ಮಹಾಸಂಪರ್ಕ' ಗ್ರಂಥ ಬಿಡುಗಡೆ ಸಮಾರಂಭ ವಿಶಿಷ್ಟವಾಗಿ ಕಂಡಿತು. ಅದಕ್ಕೆ ಕಾರಣ ಗೆಳೆಯ ಮನು (ಪಿ.ಎನ್. ರಂಗನ್) ಅದರ ಕರ್ತೃ ಅಥವಾ ಅಪರಂಜಿ ಬಳಗದ ಆತ್ಮೀಯ ಲೇಖಕ ಎಂಬಷ್ಟೆ ಕಾರಣವಲ್ಲ. 'ಋ' ಅಕ್ಷರವನ್ನೇ ಹೊಡೆದೋಡಿಸುವ ಪ್ರಯತ್ನ ನಡೆಯುತ್ತಿರುವ ಈ ನಾಡಿನಲ್ಲಿ ಋಗ್ವೇದವನ್ನು ಆಧಾರಿಸಿ ಬರೆದ 'ಮಹಾಸಂಪರ್ಕ' ಅಚ್ಚರಿಯನ್ನೇ ತಂದಿತು ಅನೇಕರಿಗೆ. ವಿದ್ವತ್ ಜನರು 'ಮನು' ಬಳಗದವರು, ಎಲ್ಲರಿಗೂ ಪುಸ್ತಕದ ವಿಷಯದ ಬಗ್ಗೆ ಇದ್ದ ಕುತೂಹಲವನ್ನು ಲೇಖಕರೇ ಸವಿವರವಾಗಿ ನಿವಾರಿಸಿದರು. ಬಹುಶಃ ಯಾವ ಪುಸ್ತಕದ ಸಮಾರಂಭದಲ್ಲಿ ಲೇಖಕ ಇಷ್ಟು ವಿವರವಾಗಿ ತಾನು ಬರೆದ ಕೃತಿ ಬಗ್ಗೆ ಹೇಳಿದ್ದು ಕೇಳಿರಲಿಲ್ಲ ಅದಕ್ಕಿಂತ ಮಿಗಿಲಾಗಿ, ವಿಚಾರವನ್ನು ಬೇಸರ ಬರದಂತೆ ಹೇಳಿದ ವೈಖರಿ. ಒಳ್ಳೆಯ ಲೇಖಕ ಒಳ್ಳೆ ಮಾತುಗಾರನಲ್ಲ ಎಂಬ ಮಾತಿಗೆ 'ಮನು' ಅಪವಾದವಾಗಿ ನಿಂತರು. ಒಬ್ಬ ವಿಜ್ಞಾನಿ, ಸಂಶೋಧಕ ಋಗ್ವೇದವನ್ನು, ಮಹಾಭಾರತವನ್ನು ಹೇಗೆ ಅರ್ಥೈಸಿಕೊಳ್ಳಬಲ್ಲ, ತನ್ನದೇ ಆದ ತರ್ಕವನ್ನು ಇಡಬಲ್ಲ ಎಂಬುದು 'ಮಹಾಸಂಪರ್ಕ' ತಿಳಿಸಬಲ್ಲ ಪ್ರಯತ್ನವೆನಿಸುತ್ತದೆ. ಗ್ರಂಥ ಬಿಡುಗಡೆ ವಿಶಿಷ್ಟವಾಗಿದ್ದಕ್ಕೆ ಮತ್ತೊಂದು ಕಾರಣ - ಗ್ರಂಥದ ಎರಡನೆ ಭಾಗವು ಮೊದಲನೆ ಭಾಗದೊಂದಿಗೆ ಬಿಡುಗಡೆಯಾದುದು, ಅವಳಿಜವಳಿಯಂತೆ. ಎರಡನೇ ಭಾಗದ ಹೆಸರು 'ಸಾಧ್ಯ' - ಮಹಾಭಾರತ ಕಟ್ಟುಕತೆಯಲ್ಲಿ, ನಡೆದಿದೆ ಎಂದು ಸಾರುವ ಕಥಾನಕ. ಅಚ್ಚುಕಟ್ಟಾದ ಮುದ್ರಣ, ಹೊರಮೈ, ತೂಕವಾದ ಪುಸ್ತಕ 700 ರೂಪಾಯಿ (ಅಂದು 500 ರೂಗೆ) ಶ್ರೀ ಸಾಮಾನ್ಯನಿಗೆ ಎಟುಕದ ದುಬಾರಿ ಬೆಲೆ ಅನಿಸಿದರೂ, ಎಷ್ಟೋ ಸಮಾರಂಭದಲ್ಲಿ ನೂರು ರೂಪಾಯಿ ಮೂಲ ಬೆಲೆಯ ಪುಸ್ತಕಕ್ಕಿಂತ ಹೆಚ್ಚಾಗಿ ಕೊಂಡು ಲೇಖಕನ ಸಹಿ ಹಾಕಿಸಿಕೊಂಡರು ಅನೇಕರು. 'ಮನು' ಅವರ ಮೇಲಿನ ಪ್ರೀತಿಯೋ 'ಋಗ್ವೇದ' ಶಕ್ತಿಯೊ ತಿಳಿಯದು, ಅದಕ್ಕಿಂತ ಹೆಚ್ಚಾಗಿ 'ಮಹಾಸಂಪರ್ಕ'ದಲ್ಲಿ ಏನಿದೆ ಎಂಬ ಕುತೂಹಲ ಜನರಲ್ಲಿ

ಇದ್ದಂತೆ ಕಂಡಿತು. ಓದುಗರೊಡನೆ 'ಸಂವಾದ' ಕಾರ್ಯಕ್ರಮವಿಲ್ಲದಿದ್ದರೂ, ಅದರ ಅರಿವಿದ್ದರೂ ಡಾ|| ಎಚ್.ಕೆ. ರಂಗನಾಥ್ ಅವರು ಪ್ರಶ್ನೆ ಕೇಳಿಬಿಟ್ಟರು. ಕೌರವರ ಜನನ ಹಾಗೂ ಕ್ಲೋನಿಂಗ್ ಪದ್ಧತಿಯ ಸಂಪರ್ಕ ಕೇಳಿದರು! ಅದಕ್ಕೆ ಉತ್ತರಿಸುತ್ತಾ 'ಮನು' ಈಗ ನಾವು ಟೆಸ್ಟ್‌ಟ್ಯೂಬ್ ಬೇಬಿಗಳು ಅನ್ನುತ್ತೀವಿ. ಆಗಿನ ಕಾಲದಲ್ಲಿ 'ಕುಂಭ' ಜನನವಿತ್ತು, ಮಹಾಭಾರತದಲ್ಲಿ, ವ್ಯಾಸ ಮಹರ್ಷಿಗಳು ಗಾಂಧಾರಿಯ ಗರ್ಭದಿಂದ ಸಿಡಿದ ನೂರು ಚೂರುಗಳನ್ನು ಗಡಿಗೆಯಲ್ಲಿ ಕಾಪಾಡಿ ನೂರು ಮಕ್ಕಳಾಗಿ ಬೆಳೆಸಿದರೆಂದರು.

'ಮಹಾಸಂಪರ್ಕ'ದ ಪ್ರಕಾರ ಬದರಿ ಬಳಿ ಸ್ಪೇಸ್‌ಶಿಪ್‌ನಲ್ಲಿ ವ್ಯಾಸ ಮಹರ್ಷಿ ನಾಯಕತ್ವದಲ್ಲಿ ಇನ್ನೊಂದು ಗ್ರಹದಿಂದ ಕೆಲವರು ಬಂದಿಳಿದರು ಅವರು ಸಂಸ್ಕೃತ ಮಾತನಾಡುತ್ತಿದ್ದರು. ಬಂದಿಳಿದವರು ಇಲ್ಲಿನವರೊಡನೆ ಲೈಂಗಿಕ ಸಂಪರ್ಕವನ್ನಿಟ್ಟುಕೊಂಡರು. ಅವರೇ ಆರ್ಯರಿರಬೇಕು. ಕೃಷ್ಣ ಕಪ್ಪಾಗಿರಲು ಸಹ ಜೆನೆಟಿಕ್ ಇಂಜಿನಿಯರಿಂಗ್ ಪ್ರಕಾರ ಸೂಕ್ತ ವಿವರಣೆ ನೀಡಿದರು. ಹೆಚ್ಚುಕಾಲ ಗರ್ಭದಲ್ಲಿದ್ದರಿಂದ ಕರಕಲಾಗಿದ್ದ ಕೃಷ್ಣ ಎಂಬ ವಿವರಣೆ ಹೇಳಿದರು.

ವಿಜ್ಞಾನಿಗಳೇ ವೇದಿಕೆಯಲ್ಲಿ ಉಪಸ್ಥಿತರಿದ್ದುದು ಆಶ್ಚರ್ಯವೇನಲ್ಲ - ಲೇಖಕ ವಿಜ್ಞಾನಿ, ಪುಸ್ತಕ ಬಿಡುಗಡೆ ಮಾಡಿದ್ದು ಡಾ|| ಎಸ್.ಆರ್. ರಾವ್. ಅಧ್ಯಕ್ಷತೆ ವಹಿಸಿದ್ದುದ್ದು ಮತ್ತೊಬ್ಬ ಇಂಜಿನಿಯರ್ ಭಾರತೀಯ ವಿದ್ಯಾಭವನದ ಎನ್. ರಾಮಾನುಜ. 'ಮಹಾಸಂಪರ್ಕ' ಸಾಧ್ಯವಾಗಲು ಶ್ರಮಿಸಿದ ದೆಹಲಿ ಕನ್ನಡಿಗ ಯು. ಪ್ರಭಾಕರರಾವ್. ದೆಹಲಿಯ ವಿಮಲ್ ಬುಕ್ಸ್ (ಇಂಟರ್‌ನ್ಯಾಷನಲ್) ರವರ ಚೊಚ್ಚಲ ಕಾಣಿಕೆ. ಅತಿ ಹೆಚ್ಚು ಹಣ ಖರ್ಚುಮಾಡಿ ತಾನೊಂದು ಸಾರ್ಥಕ ಕೆಲಸ ಮಾಡಿದೆ ಎಂಬ ಆತ್ಮವಿಶ್ವಾಸ ಕಾಣುತ್ತಿತ್ತು ಪ್ರಕಾಶಕರ ಕಣ್ಣಲ್ಲಿ.

ಗ್ರಂಥ ಬಿಡುಗಡೆ ಸಮಾರಂಭಕ್ಕೆ ಮುನ್ನ ಆಹ್ವಾನಿತರಿಗೆ ಲಘು ಉಪಹಾರ ಏರ್ಪಾಡಾಗಿತ್ತು - ಕಡೆಯ ತನಕ ಎಷ್ಟು ಜನರು ಇದ್ದರೂ ಅವರಿಗೆ 'ಊಟ'ದ ವ್ಯವಸ್ಥೆ ಗುಟ್ಟಾಗೇ ಇತ್ತು (ಅರ್ಥಾತ್ ಆಹ್ವಾನ ಪತ್ರಿಕೆಯಲ್ಲಿರಲಿಲ್ಲ) ಆದರೆ ಆದದ್ದೇನು? ಬಹಳಮಂದಿ ಅಲ್ಲೇ ಉಳಿದರು. ಊಟವೇನು ಹೇಗೋ ಆಯಿತು ಆದರೆ ತಟ್ಟೆಗಳ ಸರಬರಾಜು ಸಾಲದೇ, ಕೆಲವು ಆಹ್ವಾನಿತರೇ ತಮಗಾಗಿ, ತಮ್ಮವರಿಗಾಗಿ ಯಾರನ್ನೂ ಕಾಯದೇ ತಟ್ಟೆ ತೊಳೆದುಕೊಡುತ್ತಿದ್ದರು. ಒಟ್ಟಿನಲ್ಲಿ ಎಲ್ಲರೂ ತಮ್ಮದೇ ಸಮಾರಂಭ, ತಮ್ಮದೇ ಏರ್ಪಾಡು ಎನ್ನುವ ಮಟ್ಟಿಗೆ ಒಂದೇ ಕುಟುಂಬದವರಂತಿದ್ದರು.

ಪಾಠ - ಮುಗಿಯಿತೇ ಕಾಟ!

• *ಬೇಲೂರು ರಾಮಮೂರ್ತಿ*

ಪಾಠ ಮಾಡೋರ್‍ಗೆ ಪಾಠ ಕಲಿಸೋದು ಹೇಗೆ? ಅಂತ ಒಂದು ಪ್ರಶ್ನೆ ಕಟ್ಟೇಲಿ ಬಂತು. ಏನ್ರೀ ಇದು ಹುಚ್‌ಹುಚ್ಚಾಗಿ, ಹುಚ್ ಹೆಚ್ಚಾಗಿ ಮಾತಾಡ್ತಾರಲ್ರೀ... ಪಾಠ ಮಾಡೋರಿಗೆ ಪಾಠ ಕಲಿಸೋದು ಅಂದ್ರೇನ್ರೀ ಪಾಠ ಕಲ್ತ್‌ಕೊಂಡ್‌ಬಂದ್ ಪಾಠ ಮಾಡ್ರೀ ಅಂತಾನಾ... ಅಥವಾ ಸರಿಯಾಗಿ ಪಾಠ ಮಾಡಿ ಇಲ್ಲಾ ಪಾಠಕ್ಕೆ ಬನ್ನಿ ಅಂತಾನಾ ಅಂತ ಏನೇನೋ ಗೊಂದಲ ಉಂಟಾದ್ಮೇಲೆ ಗೂಟಿಯವರು ಗೊಗ್ಗರಿಸಿದರು. ಅದೇರೀ ಪಿಯುಸಿ ಹುಡುಗರಿಗೆ ಪಾಠ ಮಾಡ್ಬೇಡಿ ಅಂತ ಸರ್ಕಾರದೋರು ಆಜ್ಞೆಮಾಡಿ. ದಂಡ ಅಂತ ಹತ್ತು ಜನ ಅಧ್ಯಾಪಕರನ್ನ ಅಮಾನತ್ತಿನಲ್ಲಿಟ್ಟು ಇನ್ನೊಂದಿಪ್ಪತ್ ಜನನ್ನ ವರ್ಗ ಮಾಡಿದಾರಂತೆ ಅಂತ. ಅಂತೂ ಪಾಠ ಮಾಡೋ ಮೇಷ್ಟ್ರಿಗೇ ಪಾಠ ಕಲಿಸಿದ ಸರ್ಕಾರಕ್ಕೆ ಭೇಷ್ ಅನ್ನೋಣ್ವೆ ಅಥವಾ ವಿದ್ಯಾರ್ಥಿಗಳಿಗೆ ಅಯ್ಯೋ ಪಾಪ ಅನ್ನೋಣವೇ. ಯಾಕೇಂದ್ರೆ ಕಾಲೇಜಲ್ಲಿ ಪಾಠ ಮಾಡಲ್ಲ, ಮನೇಲಿ ಪಾಠ ಮಾಡ್ಬೇಡಿ ಅಂದಿದಾರೆ. ಹಾಗಾದ್ರೆ ಅವರ ಗಂಟಲಿಗೆ ರೆಸ್ಟು... ಗಂಟಿಗೂ ರೆಸ್ಟು. ವರ್ಗವಾದ ಅಧ್ಯಾಪಕರು ಅವರು ಹೋದ ಊರಿನಲ್ಲಿ ಇಂಥಾದೊಂದು ಪಾಠ ಯಾಕೆ ಷುರು ಮಾಡಿರಬಾರದು ನಮ್ಮ ಗಂಟಿಗೆ (ಅನ್ನಕ್ಕೆ ಅಲ್ಲ; ಯಾಕೇಂದ್ರೆ ಅನ್ನಕ್ಕೆ ಸರ್ಕಾರ ಸಂಬಳ ಕೊಡ್ತಿದೆಯಲ್ಲ) ಕೈ ಹಾಕಿದೋರ ಗುಂಡಿಗೆ ಬಡಿದು ಹಾಕ್ತೀವಿ ಅಂತ ಸಂಕಲ್ಪ ಏನಾದ್ರೂ ಮಾಡಿದಾರೋ ಏನೋ.

ಅಲ್ಲ ಪಾಠದ ಬಗ್ಗೆ ಯಾಕೆ ಇಷ್ಟೊಂದು ಕಾಟ ಅಂತ ಗಂಟು ಗಂಟುಮಡಕ್ಕೊಂಡಿರೋ ಮಹಾನುಭಾವರು ಕೇಳಿದರು. ಅಲ್ಲರೀ ಹೊರಗಡೆ ಪಾಠ ಮಾಡ್ತಾ ಮಾಡ್ತಾ ಕಾಲೇಜಿನ ಪಾಠನ ಮರ್‍ತ್‌ಬಿಟ್ರೆ ಹೇಗ್ರೀ... ಪಾಠ ಮಾಡೋ ಕಡೆ ಪಾಠ ಮಾಡ್ದೆ ಎಲ್ಲೆಲ್ಲೋ ಪಾಠ ಮಾಡಿದ್ರೆ ಹೇಗ್ರೀ... ಅಲ್ಲ ನಿಮ್ಮ ಹುಡುಗ ಎಲ್ಲಿ ಪಾಠಕ್ಕೆ ಹೋಗ್ತಿದಾನೆ ಅಂದ್ರೆ ನಾನೇನ್ರೀ ಹೇಳೋದು ಮಣ್ಣು ಅಂತ ಸರ್ಕಾರನೇ ದೂರಿದ್ದು.

ಅಯ್ಯೋ ನಿಮಗೊತ್ತಿಲ್ವ ಹಿಂದೊಂದ್ಸಾರಿ ಕಾಲೇಜಲ್ಲಿ ಪಾಠ ಮಾಡ್ದೆ ಎಲ್ಲೆಲ್ಲೋ ಪಾಠ ಮಾಡ್ತಾರೆ ಅಂತ ದಾವಣಗೆರೆಯಿಂದ ಅದೆಷ್ಟೊ ಪಾಠ ಮಾಡೋರ್‍ನ ನಿಮಗೆ ಸರಿಯಾಗಿ ಪಾಠ ಕಲಿಸ್ತೀವಿ ಅಂತ ಬೇರೆ ಬೇರೆ ಊರಿಗೆ ವರ್ಗ ಮಾಡಿದ್ದಾಗ ನಿಮಗೇ ಸರಿಯಾಗಿ ಪಾಠ ಕಲಿಸ್ತೀವಿ ಅಂತ ಊರಿನ ಜನ ಗಲಾಟೆ, ಘೇರಾವ್, ಬಂದ್ ಮಾಡಿ ಅವರೆಲ್ಲರನ್ನು ಹಿಂದಕ್ಕೆ ಕರೆಸಿಕೊಂಡು ಸರ್ಕಾರಕ್ಕೆ ಪಾಠ ಕಲಿಸಿದ್ರಂತೆ.

ಈಗ್ಲೂ ಹಾಗೇ ಆದ್ರೆ ಅಂತ ಚಿಂತೆ ಇದ್ದೇ ಇದೆ. ಅದಿಕ್ಕೆ ಈಗ ಇರೋ ಟೀಚರ್ಸ್‌ಗೆ ಹೇಳಿದಾರಂತೆ, ನಿಮ್ಮ ಸಹಪಾಠಿ ಮೇಷ್ಟ್ರುಗಳು ಹೊರಗೆಲ್ಲಾದರೂ ಪಾಠ ಮಾಡ್ತಿದ್ರೆ ನಮಗೆ ಹೇಳಿ ಅವರಿಗೆ ಸರಿಯಾಗಿ ಪಾಠ ಕಲಿಸ್ತೀವಿ .ಅಂತ.


ಒಳ್ಳೆ ಪಾಠ ಕಲಿಸೋದಾಯ್ತಲ್ಲ. ಇಲ್ಲಿ ಯಾರಿಗೆ ಯಾರು ಪಾಠ ಕಲಿಸಿದ್ರೂ ಅಂತಾನೇ ಗೊತ್ತಾಗ್ತಿಲ್ವೆ. ರಾಜಾ ರೋಷವಾಗಿ ಪಾಠ ಮಾಡಬೇಡಿ, ಕಣ್ಣುಮುಚ್ಚಿ ಪಾಠ ಮಾಡಿ ಅಂತ ಕಳ್ಳಪಾಠ ಕಲಿಸಿಕೊಟ್ಟಿದಾರ್ರ್ಯೇ...

ಹೀಗಾದ್ರೆ ಹೇಗೆ... ಅಲ್ಲ... ಹುಡುಗರು ಪಾಠಕ್ಕೆ ಹೋಗಿರೋಷ್ಟು ಹೊತ್ತು ಮನೇಲಿ ಅಪ್ಪ ಅಮ್ಮ (ಇಬ್ಬರೇ) ನೆಮ್ಮದಿಯಾಗಿರೋ ಕಾರ್ಯಕ್ರಮಕ್ಕೂ ಸಂಚಕಾರ ತಂದ ಈ ಸರ್ಕಾರದ ಕ್ರಮಕ್ಕೆ ಏನು ಮಾಡೋದು ಅಂತ ಅನೇಕ ತಂದೆ ತಾಯಿಯರು ಸೀರಿಯಸ್ಸಾಗಿ ಯೋಚನೆ ಮಾಡ್ತಿದಾರಂತೆ.

ಪಾಠಕ್ಕೆ ಹೋಗೋ ಅನ್ನೋ ಬದಲಿಗೆ ಇನ್ನೇನು ಹೇಳ್ಬೇಕು ಅಂತ ಚಿಂತೆ ಹಚ್ಚಿಕೊಂಡಿದಾರಂತೆ.

ಪಾಠಕ್ಕೇಂತ ಸಂಜೆ ಆರುಗಂಟೆಗೆ ಮನೆಬಿಟ್ಟೋರು ರಾತ್ರಿ ಹತ್ತು ಗಂಟೆಯ ನಂತರವೇ ಮನೆಗೆ ಮರಳುತ್ತಿದ್ದರು ನಮ್ಮ ಲೆಕ್ಚರರ್ಸ್. ಅವರ ಪತ್ನಿಯರು ಆರಾಮವಾಗಿ ಇರೋಬರೋ ಸೀರಿಯಲ್‌ಗಳನ್ನು ಅತ್ತೂ-ನಕ್ಕೂ ನೋಡಿಕೊಂಡು ಹಾಯಾಗಿ ಕಾಲ ಕಳೀತಾ ಇದ್ದದ್ದಕ್ಕೂ ಬಂತಲ್ಲ ಸಂಚಕಾರ ಅಂತ ಅವರೆಲ್ಲ ಸೇರಿ ಮತ್ತೆ ಪಾಠ ಮಾಡೋಕೆ ಪರ್ಮಿಷನ್ ಕೊಡಿ, ನಮ್ಮ ಸಂಜೆಗಳನ್ನ ಉಳಿಸಿ ಅಂತ ವಿದ್ಯಾ ಇಲಾಖೆಗೆ, ವಿದ್ಯಾಮಂತ್ರಿಗಳಿಗೆ ಒಂದು ಸಾಮೂಹಿಕ ಅಹವಾಲು ಸಲ್ಲಿಸುತ್ತಾರೆ ಅನ್ನೋದು ಕುಹಕವಲ್ಲ.

(ವಿ.ಸೂ.: ನಿಮಗೊಂದು ಪಾಠ. ಈ ಲೇಖನದಲ್ಲಿ ಪಾಠ ಅನ್ನುವ ಪದ ಎಷ್ಟು ಸಾರಿ ಬಂದಿದೆ.)



ಮೂರರ ಮೈಮೆ

– ಟಿ.ಎ. ಖುದ್ದೂಸ್

ಏನಿದು ಮೂರೂಂತೀರಾ...ಮುಟ್ಟಿದ್ದಕ್ಕೆ ಮೂರ್ಸಾರಿ ಅನ್ನೋ ಮಾತು ಗೊತ್ತಾ... ಒಪ್ಪತ್ ಉಂಟವ ಯೋಗಿ, ಎರಡ್ಹೊತ್ ಉಂಡವ ಭೋಗಿ, ಮೂರ್ಹೊತ್ ಉಂಡವನನ್ನ ಹೊತ್ಗೊಂಡ್ ಹೋಗಿ ಅನ್ನೋ ಗಾದೆ ಗೊತ್ತಾ! ಈ ಮೂರೂ ಅನ್ನೋದು ನಮ್ಮ ಬದುಕಲ್ಲಿ ಸುಖತ್ತಾಗಿ ಹಾಸ್ಕೊಂಡ್ ಬಿದ್ಕೊಂಡಿದೆ (ಹಾಸುಹೊಕ್ಕಾಗಿದೆ ಅಂತ ಹೇಳಿ ಹೇಳಿ ಬೆಜಾರು ಅಲ್ವ) ತ್ರಿಮೂರ್ತಿಗಳು ಅಂತೀವಿ, ತ್ರಿಲೋಕ ಅಂತೀವಿ ತ್ರಿಕಾಲ ಜ್ಞಾನಿ ಅಂತೀವಿ ಹೀಗೆ ಮೂರು ಅಲ್ಲಲ್ಲಿ ಇದೆ. ಈ ಮೂರು ಒಳ್ಳೇದೋ ಕೆಟ್ಟದ್ದೋ ಅಂತ ಗೊತ್ತಿಲ್ಲ. ಆದರೆ ಮೂರು ಕೆಲವರಿಗೆ ಬೇಕು ಇನ್ನು ಕೆಲವರಿಗೆ ಬೇಡ. ನಾನೂ ಟ್ರೈ ಮಾಡ್ತಾನೇ ಇದೀನಿ ಮೂರನೇ ಸಾರಿಯಾದ್ರೂ ಸಕ್ಸಸ್ ಆಗುತ್ತೋ ಇಲ್ವೋ ನೋಡ್ಬೇಕು ಅಂತಾರೆ. ಕ್ರಿಕೆಟ್ನಲ್ಲಿ ಮೊದಲನೇ ಎರಡು ಬಾಲಲ್ಲೂ ವಿಕೆಟ್ ತಗೊಂಡಿದ್ರೆ ಮೂರನೇ ಬಾಲಲ್ಲೂ ಬರುತ್ತೆ ಅಂತ ಕಾಯ್ತಿರ್ತಾರೆ ಬಂದ್ರೆ ಹ್ಯಾಟ್ರಿಕ್ ಹಂತಾರೆ (ಈ ಪದಕ್ಕೆ ಹಿಗ್ಗಿದ ಅರ್ಥ ಏನೂಂದ್ರೆ ಹ್ಯಾಗಿದೆ ನನ್ನ ಟ್ರಿಕ್ ಅಂತ) ಎರಡು ಸಿನಿಮಾ ಸಕ್ಸಸ್ ಆಗಿ ಮೂರನೇದೂ ಸಕ್ಸಸ್ ಆದ್ರೆ ಹ್ಯಾಟ್ರಿಕ್ ಹೀರೋ ಅಂತಾರೆ.... ಏನಾದರೂ ಅನಾಹುತ ಆದಾಗ ಮೂರು ಮೂರು ಸಾರಿ ಬಡ್ಕೊಂಡೆ ನನ್ನ ಮಾತು ಕೇಳ್ಲಿಲ್ಲ ಅಂತ ಗೊಣಗ್ತಾರೆ. ಹೊಸದಾಗಿ ಮದುವೆಯಾದ ಹುಡುಗ ಹೆಂಡ್ತಿನ ಮೂರು ಕೊಡ್ತೀಯಾ ಅಂತ ಕೇಳ್ತಾನಂತೆ ಎರಡು ಕೆನ್ನೆಗಂತೆ ಮೂರನೇದು ತುಟಿಗಂತೆ ಹಾಗಂತ ಯಾರೋ ಹೇಳಿದ್ದು. ಮನೇಲೂ ನೋಡಿ ಗಂಡ ಹೆಂಡ್ತಿ ಒಂದ್‌ಮಗು ಮೂರೇ ಜನ. ನಾವು ತಿನ್ನೋದೂ ಮೂರು ಹೊತ್ತು ಬೆಳಗ್ಗೆ ತಿಂಡಿ, ಮಧ್ಯಾಹ್ನ ಊಟ, ರಾತ್ರಿ ಊಟ, ಮಧ್ಯೆ ತಿನ್ನೋ ಚುಟುಕುಗಳಿಗೆ ಲೆಕ್ಕ ಇಲ್ಲ ಬಿಡಿ.

ಅಂದ್ರೆ ಮೂರು ಅನ್ನೋದು ಜನಕ್ಕೆ ಬೇಕು. ಆದರೆ ಕೆಲವರಿಗೆ ಮೂರು ಬೇಡವೇ ಬೇಡ. ಒಬ್ಬ ತಮಾಷೆಗೆ ಕಕಕ ಅಂತ ಮೂರು ಸಾರಿ ಬರೆದು ಇಲ್ಲಿ ಎಷ್ಟು ಕ ಇದೆ ಅಂತ ಓದು ಅಂದು ಓದಿದವನು ಮೂರುಕ (ಮೂರ್ಖ) ಅಂದಾಗ ಅದು ನೀನೇ ಅಂದನಂತೆ.

ನೋಡಿ ಈಗ ನಮ್ಮ ನೆರೆರಾಷ್ಟ್ರದ (ಅದು ಹೊರೆ ರಾಷ್ಟ್ರವೂ ಹೌದು) ಪಾಕಿಸ್ತಾನದ ಅಧ್ಯಕ್ಷ ಪರವೇಜ್ ಮುಷರಫ್‌ಗೆ ಮೂರೂಂದ್ರೆ ಆಗಲ್ವಂತೆ. ಅದಿಕ್ಕೆ ನೋಡಿ ಈಗ ಆಜ್ಞೆ ಹೊರಡಿಸಿಯೇ ಬಿಟ್ಟಿದಾರೆ ಯಾರಿಗೂ ಮೂರನೇ ಸಾರಿ

ಪ್ರಧಾನ ಪಟ್ಟ ಇಲ್ಲ ಅಂತ. ಈ ಸಾರಿ ಚುನಾವಣೆಗೆ ನಿಂತು ಗೆದ್ದು ಪ್ರಧಾನಿಯಾಗಿ ಮುಷರಫ್ ಅವರ ಕುರ್ಚಿ ಅಲ್ಲಾಡಿಸ್ತೀನಿ ಅಂತ ಕಾಯ್ತಿದ್ದ ನವಾಜ್ ಷರೀಫ್, ಬೆನಝೀರ್ ಭುಟ್ಟೋ ಇಬ್ಬರಿಗೂ ಮೂರು ನಾಮ ಹಾಕಿದಾರೆ ಅಲ್ವೆ.

ಮೂರು ನಾಮ ಅಂದಾಗ ಜ್ಞಾಪ್ಕ ಆಯ್ತು ಯಾರಾದರೂ ಮೋಸ ಮಾಡಿದಾಗ, ಕೈ ಕೊಟ್ಟಾಗ ಮೂರು ನಾಮ ಹಾಕಿದ ಅಂತಾರೆ ಈಗ ಮುಷರಫ್ ಮೂರು ನಾಮ ಹಾಕಿದಾರೆ. ಹೀಗೆ ಮಾಡಬೇಕಾದ್ರೆ ಅವರು ಮೂರು ಮೂರು ಬಾರಿ ಯೋಚನೆ ಮಾಡಿಬೇಕು.

ಈಗ ನಮ್ಮ ದೇಶದಲ್ಲೂ ಮೂರು ಮೂರು ಸಾರಿ ಯಾರೂ ಮಂತ್ರಿಗಳಾಗೋ ಹಾಗಿಲ್ಲ ಅಂತ ಮಾಡಿಬಿಟ್ರೆ ಎಷ್ಟು ಚೆನ್ನಾಗಿರುತ್ತೆ ಅಲ್ವ. ಆಗ ಎಲ್ರಿಗೂ ಅವಕಾಶ ಸಿಕ್ಕುತ್ತೆ. ಹೆಚ್.ಕೆ. ಪಾಟೀಲ್‌ತರ ಯಾರೂ ಹೈ ಕಮಾಂಡ್‌ಗೆ ದೂರು ಕೊಡಬೇಕಾಗಿಲ್ಲ.

ಈಗ ನಮ್ಮ ಪ್ರಧಾನಿಯವರೂ ಮೂರನೇ ಸಾರಿ ಪ್ರಧಾನಿಯಾಗಿರೋದು, ರಾಷ್ಟ್ರಪತಿಗಳಿಗೆ ಎರಡನೇ ಟರ್ಮೇ ಇಲ್ಲ ಅನ್ನುವಾಗ ಪ್ರಧಾನಿಗಳಿಗೆ ಮೂರನೇ ಟರ್ಮೇ ಅನ್ನೋ ವಾದವೂ ಬರುತ್ತೆ. ಆದರೆ ಬಿಡಿ ನಮ್ಮ ದೇಶದಲ್ಲಿ ಅಂಥಾ ಕಾನೂನು ಬರೋದೇ ಇಲ್ಲ.

ನಮ್ಮ ದೇಶದ್ದು ಒಂದೇ ಸಿದ್ಧಾಂತ. ಯಾರು, ಎಷ್ಟು ಸಾರಿ ಬೇಕಾದರೂ, ಏನು ಬೇಕಾದರೂ ಆಗಬಹುದು. ಮೂರು ನಮ್ಮಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ.

ಜೈ ಮೂರಮ್ಮ



ಈ ಸೀರೇನ ನಿಮ್ಮ
ಮೆಚ್ಚಿನ ಮನದನ್ನೇಗೆ
ಕೊಟ್ಟು ನೋಡಿ,
ಆಮೇಲೆ ಗೊತ್ತಾಗುತ್ತೆ
ಅದರ ಪ್ರಭಾವ.

ಓದುಗರ ಪತ್ರ

ಸಂಪಾದಕರು,
'ಅಪರಂಜಿ' ಬೆಂಗಳೂರು - 3

ಮಾನ್ಯರೆ!

ದಿ: 16-7-2002 ರಂದು ಏಕಕಾಲಕ್ಕೆ ಅವಳಿ-ಜವಳಿ ರೂಪದಲ್ಲಿ ಅಪರಂಜಿ ಮನೆ ಮುಂದೆ ಪ್ರತ್ಯಕ್ಷಳಾದಳು. ತಡವಾದರೂ ಪತ್ರಿಕೆ ಕೈಸೇರಿದೆ. ಧನ್ಯವಾದಗಳು.

ನಿಮ್ಮ ಹೊಸ ಆಲೋಚನೆ ಮತ್ತು ವಿನೂತನ ಯೋಜನೆ ಸ್ವಾಗತಾರ್ಹ. ಆದರೆ, 'ತಿಳಿ-ನಗೆಯ ಕಾರಂಜಿ' ತಿಳಿನಗೆಯ ಸ್ವರೂಪವನ್ನು ಕಾಯ್ದುಕೊಂಡಿರಲಿ. ನಗೆ ಕಾಣದ 'ಅಪರಂಜಿ'ಯನ್ನು ಊಹಿಸುವುದೂ ಕಷ್ಟ.

ಲೇಖನಗಳನ್ನು ಹಳೆ ಹುಲಿಗಳು ರುಚಿಕಟ್ಟಾಗಿ ಉಣಬಡಿಸಿವೆ; ನಿಜ. ಜೊತೆ-ಜೊತೆಗೆ ಮರಿಸಿಂಹಗಳಿಗೂ ಅಲ್ಪ-ಸ್ವಲ್ಪ ಪಾಲು ನೀಡಬಾರದೆ? 'ಹಳೆಬೇರು, ಹೊಸ ಚಿಗುರು' ಎಂಬ ಮಾತಿನಂತೆ ಅಪರಂಜಿ ಪರೆಗಳಚಿ ಹೊರಬರಲಿ. ಬರಿ ಹಳೇ ಮುಖಗಳನ್ನೇ ನೋಡಲು ಯಾರಿಗೆ ತಾನೆ ಬೇಸರವಾಗೊಲ್ಲ! ಅಲ್ಲೊಂದು - ಇಲ್ಲೊಂದು ನಿಲಯ ಕಲಾವಿದರಿಗೂ ಅವಕಾಶ ಕಲ್ಪಿಸಿ. ಆದರೆ ಅವರುಗಳೇ dominate ಆಗುವುದು ಬೇಡ.

ಜೂನ್ ಮತ್ತು ಜುಲೈ - 2002ರ ಸಂಚಿಕೆಗಳಲ್ಲಿ 3-4 ಪುಟಗಳಷ್ಟು ಉದ್ದನೆಯ ಲೇಖನಗಳಿವೆ. ಯಾವುದೇ/ಯಾರದ್ದೇ ಲೇಖನ 2 ಅಥವಾ 2½ (printed pages) ಪುಟಗಳ ಲಕ್ಷ್ಮಣ ರೇಖೆಯನ್ನು ದಾಟದಿರಲಿ. Short & sweet ಓದಲು ಸೊಗಸು, ಕಣ್ಣಿಗೆ ಹಿತ.

ವ್ಯಂಗ್ಯ ಚಿತ್ರಗಳ ಕುರಿತಂತೆ ಒಂದು ಸಲಹೆ: ಪ್ರತಿ ತಿಂಗಳ ಪತ್ರಿಕೆಗಳಲ್ಲಿ ಒಂದೇ ಪಡಿಯಚ್ಚಿನ ಮುಖಗಳು. ಹೊಸ - ಹೊಸ ಮಾದರಿ ವ್ಯಂಗ್ಯ ಚಿತ್ರಗಳಿದ್ದರೆ ಚೆನ್ನಲ್ಲವೆ? computerised ಚಿತ್ರಗಳಿಗೆ ಬದಲಾಗಿ ಕುಂಚದಿಂದ ಮೂಡಿ ಬಂದ ಚಿತ್ರಗಳು natural ಹಾಗೂ attractive. ಅಪರಂಜಿ ಇತ್ತ ಗಮನ ಹರಿಸಬಲ್ಲುದೆ?

ಅಲ್ಲಲ್ಲಿ ಮುದ್ರಾರಾಕ್ಷಸರ ಹಾವಳಿ ಹೆಚ್ಚಾದಂತಿದೆ. ಇವರ ದಾಳಿಯನ್ನು ಎದುರಿಸಲು ಮುಂಜಾಗ್ರತೆಯಾಗಿ ಗೂಢಚಾರರನ್ನು ನೇಮಿಸಬಾರದೆ!

ಮೇಲಿನ ಅಂಶಗಳು feed back ಗೆ (ಹಿಮ್ಮಾಹಿತಿ) ಅನುಕೂಲವಾದೀತೆ? ಈ ಅನಿಸಿಕೆಗಳು ಉಳಿ ಪೆಟ್ಟಾಗದೆ 'ಕಾಂತಾಸಂಹಿತೆ'ಯಾಗಲಿ ಎಂದು ವಿನಂತಿ.

ವಂದನೆಗಳೊಂದಿಗೆ,

ಅಪರಂಜಿ ಓದುಗ
ವೈ.ನಾ. ಶರ್ಮ
ಚಿಂತಾಮಣಿ

ಎಲ್ಲಾನೂ ಎರಡೆರಡೇ

• *ಎಂ.ಎಸ್‌.ಕೆ.*

''ಓ ಹೋ ಹೋ. ನಮಸ್ಕಾರಾ ಸಾರ್. ಬಹಳಾ ದಿನಾನೇ ಆಯ್ತು ನಿಮ್ಮನ್ನ ನೋಡಿ. ಅಪರೂಪಂ ದೈವದರ್ಶನಂ ಅಂತಾರಲ್ಲಾ ಹಾಗೇ''

''ಸದ್ಯ ಚೋರ ದರ್ಶನಂ ಅನ್ನಲಿಲ್ಲವಲ್ಲಾ. ಬದಿಕ್ಕೊಂಡೆ. ನೀವು ಹೇಗಿದೀರಿ ಸ್ವಾಮೀ? ಎಲ್ಲಿ ನಿಮ್ಮ ಅಡ್ರೆಸ್ಸೇ ಇಲ್ಲಾ ಇಷ್ಟು ದಿನ''

''ಚೋರ ದರ್ಶನಂ ಈಗ ಅಪರೂಪ ಎಲ್ಬಂತ್ರೀ. ಈಗೀಗ ಡೈಲೀ ದರ್ಶನಂ ಅಲ್ವೇನ್ರೀ ಅವರ್ದೂ. ನಂದೂ ಏನೋ ಹೀಗೇ. ಆ ಕೆಲಸ ಈ ಕೆಲಸ ನೋಡ್ಕೊಂಡೇ ದಿನ ಉರುಳಿ ಹೋಗುತ್ತೆ. ಮನೆಕಡೆ ಎಲ್ಲಾ ಚೆನ್ನಾಗಿದ್ದಾರಾ? ಕೆಲಸ ಕಾರ್ಯ ಹೇಗೆ ನಡೀತಿದೆ?''

''ಎಲ್ಲಾ ಮಾಮೂಲೇ ಕಣ್ರೀ. ಹೇಳಿಕೊಳ್ಳೋ ಅಂಥಾದ್ದೇನೂ ಇಲ್ಲಾ. ಮಗ ಇಂಜಿನಿಯರಿಂಗು. ಇನ್ನೂ ಒಂದು ವರ್ಷ ಇದೆ ಕಂಪ್ಲೀಟ್ ಮಾಡೋಕೆ. ಮಗಳು ಗ್ರಾಜುಯೇಟು. ಮದುವೆ ಮಾಡ್ಬೇಕು. ಹುಡುಕ್ತಾ ಇದ್ದೀವಿ. ಇನ್ನೂ ಒಳ್ಳೇ ಕಡೆ ವರ ಸೆಟ್ ಆಗಿಲ್ಲಾ''

''ಪರವಾಗಿಲ್ಲಪ್ಪಾ ನೀವು. ಆರ್ತೀಗೊಬ್ಬಳು, ಕೀರ್ತೀಗೊಬ್ಬಾ ಅನ್ನೋಹಾಗೆ ನಿಮ್ಮ ಸಂಸಾರ''

''ಇವಳ ಆರ್ತೀ ಯಾವಾಗಾಗುತ್ತೋ, ಇವನು ನಮಗೆಲ್ಲಾ ಕೀರ್ತಿ ಯಾವಾಗ ತರ್ತಾನೋ ನೋಡೋಣ. ನಂದೋ ರಾಜಾ ಭವಿಷ್ಯತೀ ಅನ್ನೋ ಹಾಗೇನೋ ಏನೋ''

''ಎಲ್ಲಾ ಸರೀ ಹೋಗುತ್ತೆ ನೀವು ಸುಮ್ನಿರಿ. ನೀವು ನಿಮ್ಮ ಹಳೇ ಪೆಸ್ಸಿಮಿಸ್ಟ್ ಬುದ್ಧಿ ಇನ್ನೂ ಬಿಟ್ಟಿಲ್ಲಾಂತ ಕಾಣುತ್ತೆ. ಅದ್ಸರಿ ನಿಮ್ಮನ್ನ ಹೋದ್ಸಲ ನೋಡ್ದಾಗ ಸೈಟ್ಗೆ ಅಪ್ಲೈ ಮಾಡಿದ್ರೀ. ಏನಾಯ್ತು ಸ್ವಾಮೀ ಅದು?'

''ಓಹೋ ಅದಾ. ಮನೆ ಕಟ್ಟಿ ಆಯ್ತಲ್ಲಾ. ನಿಮ್ಮನ್ನ ಗೃಹಪ್ರವೇಶಕ್ಕೆ ಕರೆಯೋಕೇ ಆಗ್ಲಿಲ್ಲಾ. ನಿಮ್ಮ ಅಡ್ರೆಸ್ಸೂ ಟೆಲಿಫೋನ್ ನಂಬರ್ರೂ ಒಂದೂ ಕೂಡಾ ಇರಲಿಲ್ಲಾ. ಈಗ್ಲಾದ್ರೂ ಕೊಡೀ ಸ್ವಾಮೀ ಬರ್ಕೊಂಡು ಬಿಡ್ತೀನಿ. ಹಾಗೇ ನಂದೂ ಬರ್ಕೊಳ್ಳೀ. ತೊಗೊಳೀ ನನ್ನ ಕಾರ್ಡು. ಮನೆ ಅಡ್ರೆಸ್ಸೂ, ಮನೆ ಟೆಲಿಫೋನ್ ನಂಬರ್ಗಳು ಎಲ್ಲಾ ಅದರಲ್ಲಿದೆ. ಮನೇಲಿ ಎರಡು ಫೋನಿದೆ. ಈ ಹುಡುಗರು ಒಂದು ಫೋನ್ ಹಿಡ್ಕೊಂಬಿಟ್ರೇ ಬಿಡೋದೇ ಇಲ್ಲ ಗಂಟೆಗಟ್ಟಲೆ. ಈಗ ಈ-ಮೈಲು ಬೇರೇ ಬಂದಿದೆಯಲ್ಲಾ. ಅದಕ್ಕೇ ನನಗೋಸ್ಕರಾನೇ ಒಂದು ಇಟ್ಕೊಂಡಿದೀನಿ.''

''ನಿಮ್ಮ ತಂದೇದು ಒಂದು ಮನೆ ಪೇಟೇಲಿತ್ತಲ್ಲಾ. ಅಲ್ಲಿವಾಗ ಯಾರಿದ್ದಾರೆ?''

''ಅದಾ, ಅದೂ ನಂದೇನೇ. ಅದೀಗ ವಿಪರೀತ ಗಲಾಟೇ ಜಾಗ. ಅಲ್ಲಿ ವಾಸ ಮಾಡೋಕೇ ಆಗೋದಿಲ್ಲಾ. ಆದಿಕ್ಕೇ ಅಲ್ಲಿ ಗೋಡೌನೂ, ಅಂಗಡೀಗಳೂ ಕಟ್ಟಿ ಬಾಡಿಗೇಗೆ ಕೊಟ್ಟುಬಿಟ್ಟಿದ್ದೀನಿ. ಬಾಡಿಗೇ ದುಡಿದುಕೊಳ್ಳುತ್ತೆ. ಬೇಕಲ್ಲಾ ದೇವರು. ರಿಟೈರ್ ಆದ್ಮೇಲೆ ತಕ್ಕಡೀ ತೂಗಿಸಬೇಕಲ್ಲಾ.''

''ಬೇಡ್ವೇ ಬೇಡ್ವೇ. ತಕ್ಕಡೀ ತೂಗಿಸೋದು ನಿಮಗೆ ಹೇಳಿಕೊಡಬೇಕೇ. ತೂಗಿಸೋದ್ರಲ್ಲಿ ನಿಮ್ದು ಎತ್ತಿದ ಕೈ ಅಲ್ವೇ? ಬೇರೆಯವರು ನಿಮ್ಮಿಂದಾ ಕಲೀಬೇಕು. ದಿವಿನಾಗಿ ಮಾಡಿದೀರಿ ಪ್ಲಾನಿಂಗು. ನಮ್ಮ ಪ್ಲಾನಿಂಗ್ ಮಿನಿಸ್ಟ್ರು ನಿಮ್ಮನ್ನ ನೋಡಿ ಕಲೀಬೇಕು.''

''ತುಂಬಾ ಹೊಗಳ್ಬೇಡೀ ಸಾರ್. ನಾಚಿಕೆ ಆಗುತ್ತೆ. ನಿಮ್ಮ ಮಾತು ಕೇಳ್ತಾ ಇದ್ರೆ ನೀವು ಹೇಳೋದೆಲ್ಲಾ ನಿಜಾಂತ ನಂಬೇ ಬಿಡೋಹಾಗಾಗುತ್ತೆ''

''ನಿಜ ಹೇಳಿದ್ರೆ ನೀವ್ಯಾಕೆ ನಾಚಿಕೆ ಪಟ್ಕೋಬೇಕೂ ಸಾರ್. ಇದೇನು ಈ ಕಾರು ಹೊಸದಾಗಿ ತೊಗೊಂಡ್ರಾ? ಹೋದ್ಸಲ ನೋಡ್ದಾಗ ಇನ್ನೊಂದಿತ್ತು? ಅದನ್ನ ಕೊಟ್ಟುಬಿಟ್ರಾ?''

''ಅದೂ ಇದೆ. ಮನೆಯೋರು ಯೂಸ್ ಮಾಡ್ತಾರೆ. ಇದು ನನ್ನ ಸ್ವಂತಕ್ಕೇಂತ ಇಟ್ಕೊಂಡಿದೀನಿ. ಮಗ ಹೀರೋ ಹೋಂಡ ಮೋಟಾರ್ ಸೈಕಲ್ ಇಟ್ಕೊಂಡಿದಾನೆ. ಮಗಳಿಗೆ ಒಂದು ಸ್ಕೂಟೀ ಕೊಡ್ಸಿದೀನಿ. ಅವರವರ ಪಾಡಿಗೆ ಅವರವರು ಓಡಾಡಿಕೊಂಡಿದ್ದಾರೆ.''

''ಪರವಾಗಿಲ್ಲಾ ಸ್ವಾಮೀ ನೀವು. ಎಲ್ಲಾ ಡಬ್ಬಲ್ ಡಬ್ಬಲ್ಲೇ ಮಾಡಿದ್ದೀರಿ. ಮನೆ, ಮಕ್ಕಳು, ಕಾರು, ಸ್ಕೂಟರ್ಗಳು, ಫೋನು ಡಬ್ಬಲ್ ಡಬ್ಬಲ್ಲು. ವೆರಿ ಗುಡ್ ವೆರಿ ಗುಡ್''

''ಬೇಕಲ್ಲಾ ಸ್ವಾಮಿ ಈ ಕಾಲದಾಗೆ ಅವೆಲ್ಲಾ. ನೀವೇ ಕೇಳಿದೀರಲ್ಲಾ ಒಂಟಿ ಬ್ರಾಹ್ಮಣ, ಒಂಟಿ ಸೀನು, ಒಂಟಿ ನಂಬರ್ರೂ ಅಪಶಕುನಾಂತ.''

''ಇನ್ನು ನಿಮ್ಮ ಕೆಲಸದಲ್ಲಂತೂ ಕೇಳೋಹಾಗೇ ಇಲ್ಲಾ. ನಿಮ್ಮದು ಕಲ್ಪವೃಕ್ಷ ಕಾಮಧೇನು ಡಿಪಾರ್ಟ್‌ಮೆಂಟು. ಕೂತಕಡೇಗೆ ಬಂದು ಬೀಳುತ್ತೆ ನಂಬರ್ 2.''


''ಏನೋ ಅಷ್ಟೋ ಇಷ್ಟೋ ಸ್ವಾಮಿ. ಎಲ್ಲಾರೂ ಮಾಡಿದ ಹಂಗೇ ನಾನೂವೆ. ಹೆಚ್ಚಿಲ್ಲಾ, ಕಮ್ಮಿಲ್ಲಾ''


''ಅಲ್ರೀ ರಾಯರೇ ಎಲ್ಲಾ ಡಬ್ಬಲ್ಲು. ಸಂಬಳ, ನಂ 2, ಬಾಡಿಗೆ ಒಟ್ಟಾರೆ ಆದಾಯ ಟ್ರಿಬ್ಬಲ್ಲು. ಮನೆಯವರು ಮಾತ್ರ ಸಿಂಗಲ್ಲೋ? ಇಲ್ಲಾ ಅಲ್ಲೂ ಏನಾದ್ರೂ ಡಬ್ಬಲ್ ಅರೇಂಜ್ಮೆಂಟ್ ಮಾಡ್ಕೊಂಡಿದೀರೋ ಹೇಗೆ? ಹ ಹ ಹ''

''ಹಿ ಹಿ ಹಿ. ಯಾಕ್ರೀ ದೇವ್ರು ನಾನು 'ಬಡವಾ ನೀನು ಮಡಗಿದ ಹಂಗೆ ಇರೂ'' ಅನ್ನೋಹಾಗೆ ಮರ್ಯಾದೆಯಾಗಿರೋದು ನಿಮಗೆ ಸರೀ ಬೀಳ್ಲಿಲ್ವಾ? ಇನ್ನೊಂದು ಸಂಬಂಧ ಕಟ್ಟಿಕೊಂಡು ಬೇಗಾಮಿ ಕೇಸ್ ಮಾಡ್ಕೊಂಡು ಜೈಲಿಗೆ ಹೋಗ್ಬೇಕಾ? ಚೆನ್ನಾಗಿದೆ ನಿಮ್ಮ ಅಡ್ವೈಸೂ. ಪರವಾಗಿಲ್ಲಾ ಸಾರ್. ನೀವು ನಿಮ್ಮ ಹಳೇ ಸೆನ್ಸ್ ಆಫ್ ಹ್ಯೂಮರ್ ಇನ್ನೂ ಇಟ್ಕೊಂಡಿದೀರ. ವೆರಿ ಗುಡ್''

''ಥ್ಯಾಂಕ್ಯೂ, ಥ್ಯಾಂಕ್ಯೂ ಈ ಸೆನ್ಸ್ ಆಫ್ ಹ್ಯೂಮರ್ ಇಂದ್ಲೇನೇ ನಾನು ಇನ್ನೂ ಉಸಿರಾಡ್ತಾ ಇರೋದು. ಅಲ್ಲಾ ರಾಯರೇ ಬೇಗಾಮಿ ಮಾಡ್ಕೊಂಡೋರು ಎಷ್ಟು ಜನ ಜೈಲಲ್ಲಿದ್ದಾರೆ ಸ್ವಲ್ಪ ಹೇಳಿ ನೋಡೋಣ? ನಮ್ಮ ಮಿನಿಷ್ಟ್ರುಗಳೇ ಎರಡು ಮೂರೂ ಮಾಡ್ಕೊಂಡು ಜುಂಮಂತ ರೋಫಾಗಿ ಮೆರೀತಿಲ್ವಾ? ನೀವೊಂದು, ಬರೀ ಪುಕ್ಕಲು ಆಸಾಮಿ. ಹೋಗ್ಲೀ ಬಿಡಿ. ಮನೇಗೆ ಹೋಗಿ ನಿಮ್ಮ ಅಮ್ಮಾವ್ರ ಹತ್ರ ಇವನು ಹೀಗೆ ಹೇಳ್ಕೊಟ್ಟಾಂತ ಹೇಳಿಬಿಡಬೇಡಿ. ನಾಳೆ ನಿಮ್ಮನೇಗೆ ಬಂದಾಗ ಬರೋ ಕಾಫೀಗೂ ಸೊನ್ನೆ ಬೀಳುತ್ತೆ. ಹೋಗ್ಲೀ ಬನ್ನಿ ಅಲ್ಲಿರೋ ದರ್ಶಿನೀಗೆ ಹೋಗಿ ಒಂದೊಂದು ಸಿಂಗಲ್ ಟೀನಾದ್ರೂ ಕುಡೀವಾ''

''ಯಾಕ್ರೀ ನಿಮಗೆ ಎಲ್ಲೆಲ್ಲೂ ಡಬ್ಬಲ್ಲು, ಇಲ್ಲಿ ಮಾತ್ರಾ ಬರೀ ಸಿಂಗಲ್ಲಾ? ನೀವಿನ್ನೂ ನಿಮ್ಮ ಆ ಹಳೇ ಒನ್‌ಬೈಟೂ ಬುದ್ಧಿ ಬಿಟ್ಟಿಲ್ಲಾಂತ ಕಾಣುತ್ತೆ. ನಾನೇ ಡಬ್ಬಲ್ ಟೀ ಕೊಡಿಸ್ತೀನಿ ಕುಡಿಯೋಣವಂತೆ ಬನ್ನಿ''




ಇಲ್ಲೇ, ಲೋ ಇನ್ನಂ
ಗ್ರೂಪ್‌ನಲ್ಲಿ ನನಗೆ
ಸ್ಯಾಂಕ್ಷನ್ ಆಗಿರೋ ಮನೆ
ಇರೋದು
ಅರೆ, ಎಲ್ಲಿಂದ
ಸುತ್ಕೊಂಬಂದ್ರೂ ಈ
ಕಂಭ ನಮ್ಮುಂದೇನೇ
ಬಂದು ನಿಲ್ಲುತ್ತಲ್ಲಾ

ಆಫ್ರಿಕನ್ ಆಗೋನಿ

• *ಶಿವು*

ನಮ್ಮ ಚಿಕ್ಕಪ್ಪ ಕಂಠಿಗೆ ಹಂಟಿಂಗ್ ಪುಸ್ತಕಗಳೆಂದರೆ ಬಲ ಖುಷಿ. ಹಲವು ವರ್ಷಗಳ ಹಿಂದೆ ಅವರು ತೀರಿಕೊಂಡಾಗ ಅವರ ಖಾಸಗಿ ಪುಸ್ತಕಗಳ ಸಂಗ್ರಹ ನನ್ನ ಪಾಲಿಗೆ ಬಂತು. ಕೆನೆತ್ ಆಂಡರ್ಸನ್ ಬರೆದ ನರಭಕ್ಷಕ ಹುಲಿಗಳ ಕಥೆಗಳು, ಆಫ್ರಿಕಾದಲ್ಲಿ ನಡೆದ ಅನೇಕ ಸಾಹಸಗಳ ಕಥನ, ರಾಬರ್ಟ್ ಫ್ಲೋರಾನ್ ಬರೆದ "ಎ ಹಂಟರ್ಸ್ ಸಾಗಾ" ಹೀಗೆ ಹತ್ತು ಹಲವಾರು ರೋಮಾಂಚಕ ಪುಸ್ತಕಗಳನ್ನೊಳಗೊಂಡಿದ್ದ ಆ ಪೇಟಿ ಪುಸ್ತಕಗಳ ಸಂಗ್ರಹ ನಿಜಕ್ಕೂ ನನಗೆ ದೊರಕಿದ ಒಂದು ಅತ್ಯಮೂಲ್ಯ ಬಳುವಳಿ. ಈ ಸಂಗ್ರಹದ ಒಂದು ಪುಸ್ತಕ ರಾಜರ್ ಕೋರ್ಟ್ನಿ ಬರೆದ ಆಫ್ರಿಕನ್ ಆಗೋನಿ.

ಒಬ್ಬ ಸಾಹಸಿ ಬಿಳಿಯನ ಪ್ರವಾಸದ ಕಥೆ ಇದು. ಒಂದು ತೆಪ್ಪದಂತಹ ತೊಗಲಿನ ದೋಣಿಯಲ್ಲಿ ಕುಳಿತು ಟಾಂಗನೀಕಾದ ಆಲ್ಬರ್ಟ್ ಸರೋವರದಿಂದ ಉಗಮವಾದ ನೈಲ್ ನದಿಯ ಮೇಲೆ ಒಬ್ಬೊಂಟಿಗನಾಗಿ ಪ್ರವಾಸ ಹೊರಟು ಉಗಾಂಡ, ಸುಡಾನ್‌ಗಳನ್ನು ದಾಟಿ ಈಜಿಪ್ಟ್ ಸೇರುವವರೆಗೂ ಆತ ಇದುರಿಸಿದ ವಿಚಿತ್ರ ಅನುಭವಗಳ ವಿವರಣೆ, ಮಳೆಗಾಲದ ಸಂಜೆ ಸೋಫಾದಮೇಲೆ ಮುದುಡಿ ಕುಳಿತು ಹುರಿಗಾಳು ಮೆಲ್ಲುತ್ತಾ ಓದಲು ಬಹು ಸೂಕ್ತವಾದ ಸರಕು. ಕಥೆ ಚೆನ್ನಾಗಿ ಓದಿಸಿಕೊಂಡು ಹೋಯಿತು. ಕೊನೆಯಲ್ಲಿ ರಾಜರ್ ಈಜಿಪ್ಟಿನ ಆಸ್ವಾನ್ ಬಳಿಯಲ್ಲಿನ ಷಲಾಲ್ ಎಂಬಲ್ಲಿ ತನ್ನ ದೋಣಿಯಾನವನ್ನು ಕೈಬಿಟ್ಟು ಕೈರೋಗೆ ಪ್ರಯಾಣ ಮಾಡುವ ಸನ್ನಾಹ ಮಾಡುತ್ತಾನೆ. ಮಾರನೆಯ ದಿನದ ರೈಲು ಪಯಣದ ಹಿಂದಿನ ಸಂಜೆ ಹಳೆಯ ಪರಿಚಯದ ಗೆಳೆಯನೊಬ್ಬನ ಮನೆಯಲ್ಲಿ ರಾಜರ್ ತಂಗಬೇಕಾಗುತ್ತದೆ. ಆ ಗೆಳೆಯ ಒಬ್ಬ ಸ್ಕಾಟಿಷ್ ಇಂಜಿನಿಯರ್. ಸಂಜೆಯ ಊಟಮಾಡಿ ಕುಳಿತು ಹರಟುತ್ತಿದ್ದಾಗ ಬುರ್ಖಾ ಧರಿಸಿದ ಮುಸ್ಲಿಂ ಮಹಿಳೆಯೊಬ್ಬಳು ಅಲ್ಲಿಗೆ ಬರುತ್ತಾಳೆ. ಅವಳ ಜೊತೆಗೆ ಒಬ್ಬ ಸೇವಕಿ.

"ಆ ಮಹಿಳೆ ಬಂದ ತಕ್ಷಣ ಆ ನಾಡಿನ ಮುಸ್ಲಿಂ ಸಂಪ್ರದಾಯದಂತೆ ನಾವಿಬ್ಬರು ಗಂಡಸರು ಮನೆ ಬಿಟ್ಟು ಹೊರಕ್ಕೆ ನಡೆದು ಹತ್ತಿರದಲ್ಲೇ ಹರಿಯುತ್ತಿದ್ದ ನದಿಯ ದಂಡೆಯಲ್ಲಿ ಕುಳಿತೆವು. ಆ ದೇಶದಲ್ಲಿ ಮಹಿಳೆಯರು ಮಾತನಾಡುವಾಗ ಪರಪುರುಷರು ಇರಬಾರದಲ್ಲ. ಮಾತನಾಡುತ್ತಾ ಕುಳಿತಾಗ ನನ್ನ ಗೆಳೆಯ ಒಮ್ಮೆಲೆ "ಪಾಪ, ಆಕೆಯದೊಂದು ಕರುಣಾಜನಕ ಕಥೆ" ಎಂದ. "ಯಾರು? ಆ ಈಜಿಪ್ಷಿಯನ್ ಹೆಂಗಸಿನ ಬಗ್ಗೆ ಹೇಳುತ್ತಿದ್ದೀರಾ" ಎಂದು ಕೇಳಿದೆ.

''ಈಜಿಪ್ಷಿಯನ್ನೂ ಅಲ್ಲ, ಮುಸ್ಲಿಮ್ಮೂ ಅಲ್ಲ. ಆಕೆ ಇಂಗ್ಲಿಷ್ ಹುಡುಗಿ. ಲಂಡನ್ನಿನಲ್ಲಿ ಅಬ್ದುಲ್ಲ ಎಂಬ ಈಜಿಪ್ಷಿಯನ್ನನೊಡನೆ ಸ್ನೇಹ ಬೆಳೆಸಿ ಅವನನ್ನು ಮದುವೆಯಾಗಿ ಅವನೊಡನೆ ಇಲ್ಲಿಗೆ ಬಂದು ಸಂಸಾರ ಹೂಡಿದ್ದಾಳೆ. ಇಲ್ಲಿನ ಜೀವನ ಗೊತ್ತಲ್ಲ. ಹೆಂಗಸರಿಗೆ ಒಂದು ಚೂರೂ ಸ್ವಾತಂತ್ರ್ಯವಿಲ್ಲ. ಸದಾಕಾಲ ಬುರ್ಖಾ ಧರಿಸಿ ಮನೆಯಲ್ಲೇ ಕುಳಿತಿರಬೇಕು. ಜಾಯಿಂಟ್ ಫ್ಯಾಮಿಲಿ ಬೇರೆ. ಇಂಗ್ಲೆಂಡಿನಲ್ಲಿ ಸ್ವಚ್ಛಂದ ಜೀವನ ನಡೆಸಿದ್ದ ತರುಣಿ. ಇಲ್ಲಿಗೆ ಬಂದು ವರ್ಷ ಸಹಿತ ಆಗಿಲ್ಲ. ಬೆಳ್ಳಗೆ ಬಿಳಿಚಿಕೊಂಡು ಪ್ರೇತದಂತೆ ಕಾಣಿಸ್ತಾಳೆ. ಇಲ್ಲಿನ ಆಹಾರ ಕೂಡ ಅವಳಿಗೆ ಒಗ್ಗಿಲ್ಲ. ವಿಟಮಿನ್ ಕಮ್ಮಿ ಆಗಿದ್ದಕ್ಕೋ ಏನೋ ಕತ್ತಿನ ಮೇಲೆಲ್ಲಾ ಕೆಂಪು ಕಲೆಗಳು ಕಾಣಿಸ್ಕೊಳ್ತಾ ಇವೆ. ಆಗಾಗ ನನ್ನ ಹೆಂಡತಿ ಹತ್ರ ಕಷ್ಟ ಹೇಳ್ಕೊಳ್ಳೋಕ್ಕೆ ಬರ್ತಿರ್‍ತಾಳೆ. ಪಾಪ ಅನ್ಸುತ್ತೆ ಅವಳನ್ನ ನೋಡಿದಾಗಲೆಲ್ಲಾ''

''ಇನ್ನೂ ಇಲ್ಲೇ ಯಾಕೆ ಸಾಯ್ತಿದಾಳೆ, ತಪ್ಪಿಸಿಕೊಂಡು ಹೋಗಬಾರ್ದೇ''

''ಅಷ್ಟು ಸುಲಭ ಅಲ್ಲ ಆ ಕೆಲಸ ರಾಜರ್, ಎಲ್ಲಿಗೇ ಅಂತ ಹೋಗ್ತಾಳೆ ಪಾಪ. ಹಡಗು ಹಿಡೀಬೇಕಾದ್ರೆ ಕೈರೋಗೆ ಹೋಗಿ ಅಲ್ಲಿಂದ ಅಲೆಗ್ಸಾಂಡ್ರಿಯಾ ತಲುಪಬೇಕು. ಆಮೇಲೆ ಇಂಗ್ಲೆಂಡು ಸೇರೋದಕ್ಕೆ ಹಡಗಿನ ವೆಚ್ಚಾನೇ ಸುಮಾರಾಗಿ ಆಗುತ್ತೆ. ಅದನ್ನೆಲ್ಲಾ ಹೇಗೆ ನಿಭಾಯ್ಸುಕ್ಕಾಗುತ್ತೆ. ಮನೇಲಿ ಸರ್ಪಕಾವಲು. ಬೇರೇ.''

ಮಾರನೇ ದಿನ ರಾಜರ್ ಕೈರೋಗೆ ಹೋಗುವ ರೈಲು ಹತ್ತುತ್ತಾನೆ. ಮೂರನೇ ಕ್ಲಾಸ್ ಪಯಣ. ಕುರಿಮಂದೆಯಂತೆ ರೈಲುಡಬ್ಬಿಯಲ್ಲಿ ಜನ ತುಂಬಿರ್‍ತಾರೆ. ಇಷ್ಟು ಸಾಲದು ಅಂತ ಕುಡಿದು ಬಂದಿದ್ದ ಹಲವು ಈಜಿಪ್ಷಿಯನ್ ಸೈನಿಕರೂ ಸಹಾ ಇದೇ ಬಂಡಿಯನ್ನು ಏರಿ ದಾಂಧಲೆ ಎಬ್ಬಿಸಿರ್‍ತಾರೆ. ಒಬ್ಬನಂತೂ ಕಿಟಕಿ ಆಚೆ ತಲೆಹಾಕಿ ನಿರಂತರವಾಗಿ ವಾಂತಿಕ್ರಿಯೆಯಲ್ಲಿ ತನ್ನನ್ನ ತೊಡಗಿಸಿಕೊಂಡಿರ್‍ತಾನೆ. ಇದನ್ನೆಲ್ಲಾ ಸಹಿಸಿಕೊಂಡು ರಾಜರ್ ಕುಳಿತಿದ್ದಾಗ, ಮುಂದಿನ ಸಾಲಿನಲ್ಲಿ ಇವನಿಗೆ ಬೆನ್ನು ತಿರುಗಿಸಿ ಒಬ್ಬ ಬುರ್ಖಾ ಮಹಿಳೆ ಕುಳಿತಿರುವುದು ಇವನ ಕಣ್ಣಿಗೆ ಬೀಳುತ್ತದೆ.

''ನಾನು ನೋಡುತ್ತಿದ್ದಂತೆ ಆಕೆ ಬುರ್ಖಾ ಸರಿಪಡಿಸಿಕೊಂಡಳು. ಆಗ ಅವಳ ಬುರ್ಖಾ ಮುಂದಕ್ಕೆ ಸರಿದು, ಕತ್ತಿನ ಹಿಂಭಾಗವನ್ನು ಮುಚ್ಚಿದ್ದ ಪದರ ಪಕ್ಕಕ್ಕೆ ಸರಿಯಿತು. ಆಕೆಯ ಕತ್ತಿನ ಮೇಲೆ ಒಂದಿಂಚು ಅಗಲದ ಕೆಂಪುಕಲೆ. ಏನೂ ಚಿಕಿತ್ಸೆಯಿಲ್ಲದೇ ಅದು ವ್ರಣವಾಗಿತ್ತು. ನಾನು ಅಸಹ್ಯಪಟ್ಟು ಅದನ್ನು ನೋಡಲಾಗದೇ ಪಕ್ಕಕ್ಕೆ ತಿರುಗುವಷ್ಟರಲ್ಲಿ ಬುರ್ಖಾಪದರ ಇನ್ನೂ ಸ್ವಲ್ಪ ಸರಿದು ಆಕೆಯ ಕೂದಲಿನ ಅಂಚು ಕಣ್ಣಿಗೆ ಬಿತ್ತು. ಕೆಂಪುಕೂದಲು! ಮುಸ್ಲಿಂ ಮಹಿಳೆಗೆ

ಕೆಂಪುಕೂದಲೇ? ತಕ್ಷಣ ನಿನ್ನೆ ರಾತ್ರಿ ನನ್ನ ಗೆಳೆಯ ಹೇಳಿದ ದಾರುಣ ಕಥೆ ನೆನಪಿಗೆ ಬಂತು. ಓಹೊ ಈಕೆ ಅವಳೇ ಆಗಿರಬಾರದೇಕೆ? ಅದನ್ನು ಖಾತರಿ ಪಡಿಸಿಕೊಳ್ಳುವ ಬಗೆ ಎಂತು? ನೇರವಾಗಿ ಮಾತನಾಡಿಸುವುದಂತೂ ಅಸಾಧ್ಯದ ಮಾತು. ಒಬ್ಬೊಂಟಿಗ ಮುಸ್ಲಿಂ ಮಹಿಳೆಯನ್ನು ಅಪರಿಚಿತ ಮುಸ್ಲಿಂ ಗಂಡಸು ಮಾತನಾಡಿಸುವುದನ್ನೇ ನಿಷೇಧಿಸಿರುವ ಸಮಾಜ ಒಬ್ಬ ಬಿಳಿಯ ಗಂಡಸಿನ ಇಂತಹ ಉದ್ಧಟತನವನ್ನು ಖಂಡಿತ ಸಹಿಸದು. ಆಕೆ ನಾನೆಂದುಕೊಂಡ ಇಂಗ್ಲಿಷ್ ಮಹಿಳೆಯೇ ಆಗಿದ್ದರೆ ನಾನು ಆಕೆಯ ನೆರವಿಗೆ ಹೋಗಲೇ ಬೇಕಾದುದರಲ್ಲಿ ಎಳ್ಳಷ್ಟೂ ಸಂಶಯವಿರಲಿಲ್ಲ. Damsel in Distress ಅನ್ನು ಕಾಪಾಡಲು ಇದಕ್ಕಿಂತ ಒಳ್ಳೆಯ ಅವಕಾಶ ಬೇರೆಲ್ಲಿದೆ ಎಂದುಕೊಳ್ಳುತ್ತಾ ಅವಳನ್ನು ಸಂಪರ್ಕಿಸುವ ಮಾರ್ಗ ಯೋಚಿಸಿದೆ. ಕೊನೆಗೆ ನಾನು ಓದುತ್ತಿದ್ದ ಪುಸ್ತಕದ ಒಂದು ಹಾಳೆಯನ್ನೇ ಹರಿದು ಅದರ ಮಾರ್ಜಿನ್ನಿನಲ್ಲಿ "ನಿಮಗೆ ಸಹಾಯ ಬೇಕಾಗಿರಬಹುದು. ಹಾಗಿದ್ದಲ್ಲಿ ಕೈರೋ ತಲುಪಿದ ತಕ್ಷಣ ಈ ವಿಳಾಸಕ್ಕೆ ಬನ್ನಿ. ನನ್ನ ಮಾತು ನಿಮಗೆ ಅರ್ಥವಾಗಿದ್ದರೆ ಮೂರುಬಾರಿ ಕೆಮ್ಮಿ" ಎಂದು ಬರೆದು ಅದನ್ನು ಮಡಿಚಿ ಬಾತ್ರೂಮಿಗೆ ಹೋಗುವವನಂತೆ ಆಕೆಯ ಮುಂದೆಯೇ ತೂಗಾಡುತ್ತಾ ನಡೆದೆ. ಆಕೆ ಸನಿಹಕ್ಕೆ ಬಂದಾಗ ಮಡಿಚಿದ್ದ ಚೀಟಿಯನ್ನು ಆಕೆಯ ಮಡಿಲಿಗೆ ಹಾಕಿದೆ. ದುರ್ನಾತ ತುಂಬಿದ ಬಾತ್ರೂಮಿನಲ್ಲಿ ಕಷ್ಟಪಟ್ಟು ಐದುನಿಮಿಷ ಕಳೆದು ಹಿಂದಕ್ಕೆ ಬರುತ್ತ ಆ ಮಹಿಳೆಯನ್ನು ದಾಟುವಾಗ ಆಕೆ ಮೂರುಬಾರಿ ಜೋರಾಗಿ ಕೆಮ್ಮಿದಳು. ದಿಗ್ವಿಜಯದ ಭಾವನೆಯಿಂದ ನಾನು ನನ್ನ ಸೀಟಿಗೆ ಹೋಗಿ ಕುಳಿತೆ."


ರಾಜರ್ ಕೈರೋ ತಲುಪಿದಾಗ ಆಕೆ ಅವನನ್ನು ಹಿಂಬಾಲಿಸುತ್ತಾಳೆ. ರಾಜರ್ ಆಕೆಯನ್ನು ತನ್ನ ಪರಿಚಯದ ಇಂಗ್ಲಿಷ್ ಕುಟುಂಬವೊಂದಕ್ಕೆ ಕರೆದೊಯ್ಯುತ್ತಾನೆ. ಮನೆಯೊಡತಿ ರಾಜರ್‌ನ ಒಡನಾಡಿಯನ್ನು ಕರುಣೆ ಸಹಾನುಭೂತಿಯಿಂದ ಸ್ವಾಗತಿಸಿದರೂ ಒಂದು ದಿನದ ಮಟ್ಟಿಗೆ ಮಾತ್ರ ತಮ್ಮ ಆಶ್ರಯ ಎಂದು ಗಂಡ ಹೆಂಡತಿ ಇಬ್ಬರೂ ಖಡಾಖಂಡಿತವಾಗಿ ಹೇಳಿಬಿಡುತ್ತಾರೆ. ಈಗ ಅಷ್ಟು ಮಾಡಿ ನಾಳೆಯೊಳಗೆ ಆಕೆಯ ಸಮಸ್ಯೆಯನ್ನು ಪರಿಹರಿಸುತ್ತೇನೆ ಎಂದು ಭರವಸೆ ನೀಡಿ ರಾಜರ್ ಹತ್ತಿರದಲ್ಲಿನ ಪಬ್ ಒಂದಕ್ಕೆ ಹೋಗುತ್ತಾನೆ.

"ಭರವಸೆಯನ್ನೇನೋ ನೀಡಿದ್ದೆ. ಆದರೆ ಆ ಮಹಿಳೆಯನ್ನು ಇಂಗ್ಲೆಂಡಿಗೆ ಸಾಗಿಸುವ ವಿಧಾನದ ಬಗ್ಗೆ ನನಗೆ ಏನೂ ಹೊಳೆಯಲಿಲ್ಲ. ಪಬ್‌ನಲ್ಲಿ ಕುಳಿತು ಕುಡಿಯುತ್ತಿದ್ದ ಸಮಯಕ್ಕೆ ಸರಿಯಾಗಿ ಒಂದು ವಿಚಿತ್ರ ನಡೆಯಿತು. ಒಂದು ಕಾದಂಬರಿ ಬರೆಯುವಾಗ ಕಾದಂಬರಿಕಾರ ಸೃಜಿಸಿಕೆ ಮೀರಿದ್ದು ಯಾವ

ಘಟನೆಯನ್ನೂ ಸೃಷ್ಟಿಸಲು ಇಷ್ಟಪಡುವುದಿಲ್ಲ. ನಂಬಲಾಗದ ಕಾಕತಾಳನ್ಯಾಯ ಬರೆವರೆ ಯಾರು ನಂಬುತ್ತಾರೆ? ಆದರೆ ನನ್ನಂತೆ ನಿಜಜೀವನದ ಘಟನೆಗಳನ್ನು ಬರೆಯುವವರಿಗೆ ಇಂತಹ ಕಟ್ಟುಪಾಡುಗಳೇ ಇರದು. ನನ್ನ ಎರಡನೆಯ ವಿಸ್ಕಿಯ ಹೊತ್ತಿಗೆ ನನಗೆ ಹಿಂದಿನ ಪರಿಚಯದ ಹಡಗಿನ ಕ್ಯಾಪ್ಟನ್ ಒಬ್ಬ ಪಬ್‌ನ ಬಾಗಿಲನ್ನು ನೂಕಿಕೊಂಡು ಒಳಗೆ ಬಂದ.''

ರಾಜರ್ ತನ್ನ ಕ್ಯಾಪ್ಟನ್ ಗೆಳೆಯನಿಗೆ ವಿಸ್ಕಿಕೊಟ್ಟು ಪುಸಲಾಯಿಸಿ ಅವನು ಆ ಇಂಗ್ಲಿಷ್ ಮಹಿಳೆಯನ್ನು ತನ್ನ ಹಡಗಿನಲ್ಲಿ ಕದ್ದು ಸಾಗಿಪುಸುವುದಕ್ಕೆ ಒಪ್ಪಿಸುತ್ತಾನೆ.

''ಮಾರನೆಯ ದಿನ ಆಕೆಯನ್ನು ನನ್ನ ಕ್ಯಾಪ್ಟನ್ ಗೆಳೆಯನ ಸುಪರ್ದಿಗೆ ಒಪ್ಪಿಸಿ ನನ್ನ ದಾರಿ ಹಿಡಿದೆ. ಆಮೇಲೆ ಎಂಟು ತಿಂಗಳ ನಂತರ ಆಕೆ ಇಂಗ್ಲೆಂಡನ್ನು ಸುಖವಾಗಿ ತಲುಪಿದ ಸುದ್ದಿ ತಿಳಿಯಿತು. ಸಿಲ್ವಿಯ ನನಗೊಂದು ಪುಟ್ಟ ಪತ್ರ ಬರೆದು ತನ್ನ ಧನ್ಯವಾದಗಳನ್ನು ನನಗೆ ಹೇಳುತ್ತಾ, ತಾನು ತನ್ನ ತಾಯಿಯ ಮನೆಯಲ್ಲಿ ಇರುವುದಾಗಿಯೂ, ಹತ್ತಿರದ ಡಿಪಾರ್ಟ್ಮೆಂಟ್ ಸ್ಟೋರಿನಲ್ಲಿ ಕೆಲಸಕ್ಕಿರುವುದಾಗಿಯೂ ಆಕೆ ತನ್ನ ಪತ್ರದಲ್ಲಿ ತಿಳಿಸಿದ್ದಳು. ಮುಂದುವರಿದು ತನ್ನ ಮಾಜಿ ಈಜಿಪ್ಷಿಯನ್ ಗಂಡ ಅಬ್ದುಲ್ಲನೊಂದಿಗೆ ವಿವಾಹ ವಿಚ್ಛೇದನದ ಕಾರ್ಯ ಬಹುಮಟ್ಟಿಗೆ ಮುಗಿಯುವ ಹಂತಕ್ಕೆ ಬಂದಿದೆಯೆಂದು ತಿಳಿಸಿ, ವಿಚ್ಛೇದನ ದೊರಕಿದ ತಕ್ಷಣ ತಾನು ತನ್ನ ಹೊಸ ಇನಿಯನನ್ನು ಮದುವೆಯಾಗಲು ಕಾತುರಳಾಗಿದ್ದಾಳೆಂದು ಸಿಲ್ವಿಯ ತನ್ನ ಪತ್ರದಲ್ಲಿ ಬರೆದಿದ್ದಳು. ನನ್ನೊಂದಿಗೆ ಭ್ರಾತೃಭಾವನನ್ನು ಹೊಂದಿದ್ದ ಸಿಲ್ವಿಯ ತಾನು ಮದುವೆಯಾಗಲಿರುವ ಹೊಸ ಇನಿಯನ ಹೆಸರನ್ನೂ ತನ್ನ ಪತ್ರದಲ್ಲಿ ಸೂಚಿಸಿದ್ದಳು. ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಆತನ ಹೆಸರು ಹಸನ್!''



ಟಕ್ಕರ್ ಸವಾರಿ

• *ಶ್ಯಾಮಲ ರವಿಶಂಕರ್*

ನಾನು ವಿದೇಶ ಯಾತ್ರೆ ಮುಗಿಸಿ ಬರುವಷ್ಟರಲ್ಲಿ ನಮ್ಮ ಊರಿನಲ್ಲಿ ಆದ ಬದಲಾವಣೆಗಳನ್ನು ಕಂಡು ಚಕಿತಳಾದೆ. ಕೆಲವೇ ದಿನಗಳಲ್ಲಿ ನಮ್ಮ ಊರು ಅಭಿವೃದ್ಧಿಯೆಡೆಗೆ ಧಾವಿಸಿರುವುದನ್ನು ಅದೂ ರಾತ್ರೋರಾತ್ರಿ ಅನ್ನುವಷ್ಟು ಬೇಗ ಮುನ್ನಡೆದಿರುವುದನ್ನು ಕಂಡು ಸಂತೋಷವಾಯಿತು. ನಮ್ಮ ನಗರ ಸಾರಿಗೆ ಸಂಸ್ಥೆ 'ಟಕ್ಕರ್'ಗಳನ್ನು ನಮಗೆ ಪರಿಚಯಿಸಿರುವುದು ಅವುಗಳಲ್ಲಿ ಒಂದು! ನಮ್ಮ ಸಾರ್ವಜನಿಕ ಸಾರಿಗೆಗೆ ಇನ್ನೊಂದು ವಿಧವಾದ ವಾಹನ ಲಭ್ಯ! ಅದೂ ಬಸ್ಸಿಗಿಂತ ಎಂಟೇ ಆಣೆ ಜಾಸ್ತಿ! ಇದೇನು ನಂಬಬಹುದೇ, ಇಲ್ಲವೇ? ಎಂದು ಏನೇನೋ ಸಂದೇಹಗಳು ನನ್ನಲ್ಲಿ ಮೂಡಿದವು.

ಕಾಲಕ್ರಮೇಣ ಎಲ್ಲಾ ಸಂದೇಹಗಳೂ ಉತ್ತರ ಸಿಗಲಿ, ಬಿಡಲಿ, ಅವುಗಳ ಸ್ಥಾನದಲ್ಲಿ ಬಿದ್ದವು ಎನ್ನಿ! ಈ ಟಕ್ಕರ್‌ಗೆ ಬೇರೆ ಬೇರೆ ಹೆಸರುಗಳುಂಟು. ಉದಾ: ಏಳು - ಸೀಟರ್ ಆಟೋ, ಫಟೀ, ಶೇರ್ಡ್ ಆಟೋ, ಮಿನಿಟಾಕ್ಸಿ, ಬಡವರ ಆಟೋ, ಟಕ್ಕರ್ ಇತ್ಯಾದಿ. ನಾನು ಇದನ್ನು 'ಟಕ್ಕರ್' ಅಂತಲೇ ಕರೆಯುತ್ತೇನೆ. ಏಕೆಂದರೆ ನನ್ನ ಪ್ರಕಾರ ಮಿಕ್ಕೆಲ್ಲಾ ಹೆಸರುಗಳೂ ಅಸಂಬದ್ಧ! ನನ್ನ ಲಾಜಿಕ್ ಕೇಳಿದ ಮೇಲೆ ನೀವು ಅದನ್ನ 'ಟಕ್ಕರ್' ಅಂತ ಕರೆಯೋದೇ ಕರೆಕ್ಟ್ ಅಂತೀರಿ, ನನಗೆ ಗೊತ್ತು! ಈಗ ನೋಡಿ, ಅವನೇನೋ 7-ಸೀಟರ್ ಅಂತ ಬೋರ್ಡು ಹಾಕ್ಕೊಂಡರೆ, ನಾವು ಒಪ್ಪೋದಾದ್ರೂ ಹೇಗೆ? ಅದರಲ್ಲೂ ಕನಿಷ್ಠ ಪಕ್ಷ 14 ಜನಾನಾದ್ರೂ ಹಾಕಿರೋವಾಗ? ಆದ್ದರಿಂದ, ಆ ಹೆಸರು ಔಟ್!'ಫಟೀ' ಅನ್ನುವುದು ದೆಹಲಿಯ ಫಟ್‌ಫಟೀಯ ತದ್ಭವ. ಆಗಿರಬೇಕು. ಅದಕ್ಕಿಂತ 'ಲೊಡಕ್' ಅಂದರೆ ಅದರ ದೇಹಕ್ಕೆ ಒಪ್ಪುತ್ತೆ. ಆದ್ದರಿಂದ ಅದೂ ನನ್ನ ದೃಷ್ಟಿಯಲ್ಲಿ ಔಟ್! 'ಮಿನಿಟ್ಯಾಕ್ಸಿ' ಅಂತ ಆಟೋಗೆ ಕೂಡ ಬೋರ್ಡಿದೆ! ಈಗ 'ಶೇರ್ಡ್ ಆಟೋ'ನ ತೊಗೊಳ್ಳಿ, ಇದು Specific Nomenclature ಎಂದೂ ಆಗೊಲ್ಲ, ಏಕೇ ಅಂತೀರಾ? ಎಷ್ಟೋ ಸಲ ಒಂದೇ ದಿಕ್ಕಿಗೆ ಹೋಗುವ 2-3 ಬಸ್ ಸ್ಟಾಪ್ ಮೇಟ್ಸ್ ಸಾಧಾರಣ ಆಟೋನಲ್ಲೂ ಶೇರ್ ಮಾಡಿಕೊಂಡು ಹೋಗುತ್ತಾರೆ. ಇನ್ನು 'ಬಡವರ ಆಟೋ' ಈ ಕಾಲದಲ್ಲಿ ಬಡವರಾರು? So, ಅದೂ out!

ಈಗ ನೋಡಿ 'ಟಕ್ಕರ್' ಎನ್ನುವುದು ಎಷ್ಟು ಸತ್ಯ ಅನ್ನುವ ಮಾತು ಎಂದು. ಹಿಂದಿಯಲ್ಲಿ 'ಟಕ್ಕರ್' ಅಂದರೆ ಡ್ಯಾಶ್ ಹೊಡೆಯುವುದು ಅಂತ. ಅದೂ

ಡ್ರೈವರ್‌ಗಳ ಹಾಗೂ ಕಾಲೇಜು ಹುಡುಗರ ಭಾಷೆಯಲ್ಲಿ! ಈ ವಾಹನ ರೋಡೆಲ್ಲ ತನ್ನದೇ ಎಂದು ಬೇರೆಲ್ಲಾ ವಾಹನಗಳನ್ನು ಅಟ್ಟಿಸಿಕೊಂಡು ಹೋಗಿ, ಮುಟ್ಟಿ/ ತಳ್ಳಿ/ಬೀಳಿಸಿ ಅಂತೂ ಟಕ್ಕರ್ ಅನ್ನೋ ಹೆಸರನ್ನು ಸಾರ್ಥಕ ಪಡಿಸಲೆತ್ನಿಸುತ್ತದೆ. 'ಟಕ್ಕರ್' ಮಾಡಲೋಸುಗ ಬಂದಿಳಿದಿರುವೆ ನಾನು ಎನ್ನುವುದೇ ಅದರ ಧ್ಯೇಯ ಎಂದು ಕಾಣುತ್ತದೆ. ಅದಕ್ಕೇ ಆ ಹೆಸರು ಒಪ್ಪುತ್ತೆ!

ಇದನ್ನು ನೋಡಿದಾಗ ಆಟೋ ಒಂದಕ್ಕೆ ದೊಡ್ಡ ಟಾರ್‌ಪಾಲ್ ಹೊದಿಸಿದ ಹಾಗೆ ಅನಿಸುತ್ತದೆ. ಅಭ್ಯಾಸವಾಗಿಬಿಟ್ಟ ಮೇಲೆ ಇಲ್ಲಾ ಏನೂ ಅನಿಸುವುದಿಲ್ಲ ಬಿಡಿ. ರಸ್ತೆಯಲ್ಲೆಲ್ಲೋ ಇದ್ದಕ್ಕಿದ್ದಂತೆ 'ಢಗ-ಢಗ' ಎಂದು ಶಬ್ದ ಬಂದಾಗ ಕತ್ತು ಕೊಂಕಿಸುವಷ್ಟರಲ್ಲಿ ಚಂಡಮಾರುತದಂತೆ ಅಡ್ಡಾದಿಡ್ಡಿಯಾಗಿ ರೋಡೆಲ್ಲಾ ಉಪಯೋಗಿಸಿಕೊಂಡು ಹೊಗೆ ಉಗುಳುತ್ತಾ ಗಲಾಟೆಯಾಗಿ ಬಂದು 'ಗಕ್ಕನೆ' ನಿಮ್ಮ ಮುಂದೆ ಬಂದು ನಿಂತ ವಾಹನವೇ ಟಕ್ಕರ್! ನಿಮಗೆ ಆಗ ಕಾಣಬರುವುದು ಅದರೊಳಗಿಂದ ಒಬ್ಬಿಬ್ಬರು ಇಳಿದು ಏನೋ ಚೌಕಾಸಿ ನಡೆಸಿ ಒಂದಷ್ಟು ನಾಣ್ಯಗಳನ್ನು ಎಣಿಸಿ ಚಾಲಕನ ಕೈಯಲ್ಲಿ ಕುಕ್ಕಿ ದುರ್ದಾನ ತೆಗೆದುಕೊಂಡವರಂತೆ ಹಿಂತಿರುಗದೇ ತಮ್ಮ ದಾರಿ ಎಣಿಸುತ್ತಾರೆ. ತದನಂತರ ನೀವಿನ್ನೂ ಅದರ ಕಡೆ ನೋಡುತ್ತಿದ್ದರೆ, ನಿಮಗೆ ಆಹ್ವಾನ ಖಂಡಿತ! ನೀವು ಹತ್ತಿದರೆ ಸರಿ, ಇಲ್ಲದಿದ್ದರೆ ಎಷ್ಟು ಜನ ಇಳಿದರೋ ಅಷ್ಟು ಜನ ಮತ್ತೆ ಬರುವವರೆಗೂ ಅವರಿವರನ್ನೂ, ಕಂಡಕಂಡವರನ್ನೂ ಕರೆಯುತ್ತಾ 'ಭರ್‍ರೆಂದು'' ಮತ್ತೆ ರೋಡಿನ ಮೇಲೆ ತನ್ನ ಅಧಿಕಾರ ಚಲಾಯಿಸುತ್ತಾ 'ಪುನರಾಗಮನಾಯಚ' ಅಂತ ಓಡುತ್ತದೆ.

ಅಲ್ಲಿಯವರೆಗೂ ಅದರ ಹಿಂದಿನ ವಾಹನಗಳೆಲ್ಲಾ ನಿಂತು ಮೂಕ ಪ್ರೇಕ್ಷಕವಾಗುತ್ತವೆ. ಫಲಿತಾಂಶ ಹಿಂದೆ-ಹಿಂದೆ ಒಂದು ಮೈಲಾದರೂ ಟ್ರಾಫಿಕ್ ಜ್ಯಾಮ್!

ಮೂಲತಃ ಟಕ್ಕರ್ ಆಟೋರಿಕ್ಷಾ ತರಹನೇ ತ್ರಿಚಕ್ರವಾಹನ. ಸ್ವಲ್ಪ ಅಗಲ ಹೆಚ್ಚಿರುತ್ತದೆ. ಚಾಲಕನೇ ಹೆಚ್ಚಿನ ಮಟ್ಟಿಗೆ ಮಾಲಿಕನಾಗಿರುತ್ತಾನೆ. ಅವನ ಪಕ್ಕದಲ್ಲಿ ಮರದ ಹಲಗೆ ಹಾಕಿ ಆರಾಮವಾಗಿ ಒಬ್ಬರು ಕೂಡುವ ಕಡೆ ಮೂರು ಜನರನ್ನು ಕೂಡಿಸುತ್ತಾನೆ. ಹಿಂದೆ ಎದುರು ಬದುರಾಗಿ ಎರಡು ಸೀಟುಗಳಿರುತ್ತವೆ. ಒಂದು ಸೀಟಿನ ಮೇಲೆ ಅಬ್ಬಾ ಅಂದರೆ ಮೂರು ಜನ ಕೂರಬಹುದಾದ ಕಡೆ ನಾಲ್ವರನ್ನು ಮಕ್ಕಳನ್ನು (ಲೆಕ್ಕವಿಲ್ಲ) ಕುರಿಗಳಂತೆ ಏರಿಸುತ್ತಾನೆ. ಜೊತೆಗೆ ಸಣ್ಣದೊಡ್ಡ ಮೂಟೆಗಳು ಬೇರೆ. ಬಸ್ ಮುಷ್ಕರದ ದಿನಗಳಲ್ಲಿ ಇವನ ಸುಗ್ಗಿಯೇ ಸುಗ್ಗಿ! ಆಗಾಗ ಪೋಲೀಸ್‌ನವರು ಇವನನ್ನು ದಂಡ ಅಥವಾ ಲಂಚ ಎಂಬ ಸುಲಿಗೆಗೆ ಒಳಪಡಿಸಿದರೆ ದಿನವೆಲ್ಲಾ ಅದನ್ನು ಹೇಳಿಕೊಂಡು ಕಾಲ ಕಳೆಯುತ್ತಾನೆ.

ಇಷ್ಟು ಜಬರ್ದಿನಿಂದ ನಡೆದುಕೊಳ್ಳುವವನಿಗೆ ಅಸಿಸ್ಟೆಂಟ್ ಒಬ್ಬ ಬೇಡವೇ? ಅದಕ್ಕೆ ಸುಮಾರು 7 ರಿಂದ 12 ವರ್ಷದೊಳಗಿನ ಚಿಲ್ಟುವನ್ನು ನೇಮಿಸುತ್ತಾನೆ. ಈ ಚಿಲ್ಟುವಿನ ಜೋರು ಚಾಲಕನ ಜಂಭಕ್ಕಿಂತ ಹೆಚ್ಚು! ದೇವರಿಗಿಂತ ಪೂಜಾರಿಯ ಪಕ್ಷಪಾತಕ್ಕೆ ಸಿಕ್ಕ ಹುಲುಮಾನವ ಈ ಚಿಲ್ಟುವಿನ ಜೋರಿನ ಮುಂದೆ ತಗ್ಗಿ ಬಗ್ಗಿ ನಡೆಯದೆ ಇರಲಾಗುವುದಿಲ್ಲ. ಚಿಲ್ಟುವಿನ ಚೋಟುದ್ದದ ಚಡ್ಡಿಗೆ ಒಂದೆರಡು ಗುಪ್ತ ಜೇಬುಗಳಿರುತ್ತವೆ. ಅವನ ಕೃಪಾಕಟಾಕ್ಷ ನಿಮ್ಮೆಡೆಗಿದ್ದರೆ ನೂರರ ನೋಟಿಗೂ ಚಿಲ್ಲರೆ ಸಿಗುವ ಅವಕಾಶವಿದೆ. ಆಗಾಗ ಹತ್ತಿಪ್ಪತ್ತರ ನೋಟುಗಳು ಆ ಗುಪ್ತ ಜೇಬುಗಳ ಮೊರೆ ಹೋಗುತ್ತವೆ. ಪಾಪ ಚಾಲಕನ ಗಮನ ಮೊದಲು ವೇಗದ ಮೇಲೆ, ನಂತರ ರಸ್ತೆಯ ಮೇಲಿರುವಾಗ ಚಿಲ್ಟುವಿನ ಚಾಲಾಕಿತನದ ಕಡೆಗೆ ಹೇಗಿರಬೇಕು? ವೃತ್ತಿಗೆ ಸೇರಿದ ಮೊದಲಲ್ಲಿ ಬೆರಳು ಚೀಪಲು ಮಾತ್ರ ಗೊತ್ತಿದ್ದ ಚಿಲ್ಟುವಿಗೆ ಗುಪ್ತಧನ ಪೇರಿಸಲು ಕೇವಲ ಕೆಲವೇ ದಿನಗಳು ಸಾಕು. ಕಿರೀಕ್ ಪಾರ್ಟಿಯನ್ನು ನೇರ ಚಾಲಕನಿಗೆ ರವಾನಿಸಿ ತನ್ನ ಸುಖ ನೋಡಿಕೊಳ್ಳುವಷ್ಟು ಚಿಗುರುತ್ತಾನೆ. ಮುಂದಿನ ಹಂತ ಬೀಡಿ ಸೇದುವಿಕೆ, ಶಿಳ್ಳೆ ಹಾಕುವುದು ಇತ್ಯಾದಿ!

'ರಾಜಾ ಹಿಂದೂಸ್ತಾನಿ' ಎಂಬ ಹಿಂದಿ ಸಿನಿಮಾ ಬಿಡುಗಡೆಯಾದ ಮೇಲೆ ಎಲ್ಲಾ ಚಿಲ್ಟುಗಳೂ 'ತಮ್ಮ ಸಮಾನರಾರಿಹರೂ' ಎಂದು ಮೆರೆಯುತ್ತಿದ್ದಾರೆ. ಹೀರೋ ಆಮೀರ್‌ಖಾನ್ ಒಬ್ಬ ಟ್ಯಾಕ್ಸಿ ನಡೆಸುವವ. ಅವನಿಗೊಬ್ಬ ಚಿಲ್ಟು ಅಸಿಸ್ಟಂಟ್. ಅವನದು ಮಿತಿಮೀರಿದ ಮಾತು. ಆಯಿತಲ್ಲಾ, ಇನ್ನೇನು ಬೇಕು, ಇವುಗಳಿಗೆ? ಆಮೀರ್ ಖಾನ್‌ನ ಬಂಟನಂತೆ ಮಾತು, ಇಶ್ಟೈಲ್, ಹಾಡು ಇತ್ಯಾದಿ ನಮ್ಮ ಮನರಂಜನೆಗಾಗಿ ಮೀಸಲು!

ಇವೆಲ್ಲ ಚಾಲಕನ ಕಿವಿಗೆ ಬಿದ್ದ ತಕ್ಷಣ, ''ರೇ, ಲಫಡೇ, ಕ್ಯಾರೇ, ಚೀಕ್‌ರೇ, ಭೂಲ್ ಗಯಾ ಕ್ಯಾ ತುಮಾರಾ ಕಾಮ್?'' ಅಂತ ಅರಚುತ್ತಾನೆ. ಶುರು, ಚಿಲ್ಟುವಿನ ಪಲ್ಲವಿ. ''ಕೋಟಿ, ಸೈದಾಬಾ (ದ್), ಐ.ಎಸ್. ಸದನ್, ಚಂಪ್ (ಪೇಟ್), ಆರ್.ಟಿ.ಸಿ. (ಕಾಲೋನಿ), ಬಿ.ಎನ್. ರೆಡ್ಡಿ (ನಗರ್).... 'ಅಂತಲೋ, ಕೋಠಿ, ಸೈದಾಬಾ, ಸದನ್, ಯಾದ್‌ಗಿರ್ C/O ಟಾಕೀಸ್, ಡಿಫೆನ್ಸ್ (ಲ್ಯಾಬ್ಸ್), (ಚಂದ್ರಾಯನ) ಗುಟ್ಟ, (ಪಹಾಡಿ) ಶರೀಫ್'' ಅಂತಲೋ ಕೂಗು ಹಾಕ್ತಾನೆ.

(ಸೂ: ಬ್ರ್ಯಾಕೆಟ್‌ನಲ್ಲಿರುವುದನ್ನು ಉಚ್ಚರಿಸುವುದಿಲ್ಲ! They are understood!) ಇವನ ವಿಶೇಷತೆಯೆಂದರೆ (ಅಪರೂಪಕ್ಕೆ) ಜಾಗವಿದ್ದರೂ ಇವನು ಕೂರುವುದಿಲ್ಲ. (ಬಾಗಿಲಿಲ್ಲದ) ಪ್ರವೇಶದಲ್ಲೇ ನಿಂತು ಒಂದು ಕಾಲನ್ನು

ಒಳಗಿರಿಸಿ, ಇನ್ನೊಂದನ್ನು ದಾರಿಯುದ್ದಕ್ಕೂ ಅಲ್ಲಾಡಿಸುತ್ತಾ ಬೀಸುತ್ತಾ ಓಡಾಡುತ್ತಿರುತ್ತಾನೆ. ಪೀಕ್ ಅವರ್ಸ್‌ನಲ್ಲಿ 15-17 ಜನರನ್ನು ತುಂಬಿ ಅಮಿತ ವೇಗವಾಗಿ ಓಡುವ ಟಕ್ಕರ್ ತನ್ನ ದೇಹದ ನಿಶ್ಶಕ್ತಿಯಿಂದಾಗಿ ಅತೀ ಗಲಾಟೆ ಮಾಡುತ್ತಾ ರಸ್ತೆಯ ಮಧ್ಯದಲ್ಲಿ ಓಡುವಾಗ ಬೇರೆಲ್ಲಾ ವಾಹನಗಳು ಮರ್ಯಾದೆ ಕೊಟ್ಟು ಪಕ್ಕಕ್ಕೆ ಸರಿಯದಿದ್ದರೆ ಗೋವಿಂದನ ಪಾದ ಸೇರುವುದು ನಿಶ್ಚಯ! ಆದರೆ ಚಾಲಕ (ಟಕ್ಕರಿನ ಚಾಲಕ) ಮಾತ್ರ ಎಂದಿಗೂ ಬಗ್ಗುವುದಿಲ್ಲ ಈಚೆಗೆ ಇವನ ಶ್ರೀಮಂತಿಕೆ ಹೆಚ್ಚಾಗಿ ಟೇಪ್ ರಿಕಾರ್ಡರ್‌ನ್ನು ಅಳವಡಿಸಿಕೊಂಡು ಗಟ್ಟಿಯಾಗಿ ಹಾಡುಗಳನ್ನು ಕೇಳಿಸುತ್ತಾ ಅದರೊಂದಿಗೆ ಅವನೂ ಹಾಗೂ ಚಿಲ್ಟೂನೂ ಹಾಡುತ್ತಾ ಮೆರೆಯುತ್ತಾರೆ! ಎತ್ತು ಏರಿಗೆಳೀತು ಅಂದ್ರೆ ಕೋಣ ನೀರಿಗೆ' ಅನ್ನೋ ಹಾಗೇ ಮೊನ್ನೆ ಡ್ರೈವರ್ ಪಕ್ಕದ ಮರದ ಹಲಗೆಯ ಮೇಲೆ ಯಾರೂ ಇಲ್ಲದ್ದರಿಂದ ನನಗೆ ಕೂರುವ ಸಂದರ್ಭ ಒದಗಿ ಬಂತು! ಪಾಪ, ಚಾಲಕನು ವಿನಮ್ರವಾಗಿ ಎಲ್ಲಿಂದಲೋ 9"x9"ನ ಸ್ಪಂಜೊಂದನ್ನು ತೆಗೆದು ಆ ಮರದ ಪೀಠೋಪಕರಣ ನನಗಾಗಿ ಸಜ್ಜುಪಡಿಸಿದ. ಹಿಂದಿನ ಎರಡು ಸೀಟುಗಳು ಕಾಲೇಜು ಹುಡುಗರು ತುಂಬಿದ್ದು ಗಲಾಟೆ ವಿಪರೀತವಾಗಿತ್ತು. ನಾನೇ (ಹೇಗೂ ಮುಂದಿದ್ದೆನಲ್ಲಾ!) ಟೇಪ್ ರೆಕಾರ್ಡ್‌ನ ಸ್ವಿಚ್ ಆಫ್ ಮಾಡಿದೆ ಅವನ ಗಮನ ಬದಲಾಯಿಸಲು ಮಾತಿಗೆಳೆದೆ 'ಟಕ್ಕರ್‌ಗಳು ಈಚೀಚೆಗೆ ಬಂಡವಾದರೂ, ಅವುಗಳ ರೂಪ ಯಾತಕ್ಕೆ ಇಷ್ಟು ಹೀನಾಯವಾಗಿದೆ? ಇಷ್ಟು ಬೇಗ ಆರ್.ಟಿ.ಸಿ. ಬಸ್ಸುಗಳು ಕೂಡ ಹಳೆಯದಾಗಿರುವುದಿಲ್ಲವಲ್ಲಾ? ಇವನ್ನು ಈ ಪರಿಸ್ಥಿತಿಗೆ ತರಲು ನೀವೆಲ್ಲಾ ಏನೆಲ್ಲ ಕಷ್ಟ ಪಟ್ಟಿರಬೇಡ?' ಎಂದೆ.

''ಅಲ್ಲಾ ಮೇಡಂ, ಇದು ಹೊಸದೆಂದು ನಿಮಗೆ ಹೇಳಿದ್ದು ಯಾರು? ಇದಕ್ಕೆ ಐದೂವರೆ ವರ್ಷ ವಯಸ್ಸು. ದಿನಕ್ಕೆ ಎಷ್ಟು ಹೊರೆ ಹೊರುತ್ತೆ ಗೊತ್ತಾ?'' ಅಂದ. ''ಬಸ್ಸಿಗಿಂತ ಹೆಚ್ಚೇನೂ ಹೊರುವುದಿಲ್ಲ ಬಿಡಯ್ಯಾ. ಇಷ್ಟಕ್ಕೂ ಐದೂವರೆ ವರ್ಷದ ಹಿಂದೆ ಇದು ಇಲ್ಲಿ ಇರಲೇ ಇಲ್ಲವಲ್ಲ! ಇದ್ದಿದ್ದರೆ ನನ್ನಂಥವರು ಉಪಯೋಗಿಸುತ್ತಿದ್ದೆವು'' ಯಾರಿಗ್ಹೇಳ್ತಿದ್ದೀಯಾ ಅನ್ನೋ ಧೋರಣೆಯಲ್ಲಿ ಹೇಳಿದೆ.


''ನೀವು ಕರೆಕ್ಟು ಹೌದು ತಪ್ಪೂ ಹೌದು'' ಅಂದು ಒಗಟನ್ನು ಬಿಡಿಸಿದ.

''ಇವನ್ನು ನಾನೇ ಎಷ್ಟೋ ವರ್ಷದ ಹಿಂದೆ ಕುಗ್ರಾಮಗಳಲ್ಲಿ ಓಡಿಸಿದ್ದೇನೆ. ನಾನು ಚಿಕ್ಕವನಿದ್ದಾಗ, ನೋಡ್ತಿದ್ದೀರಲ್ಲಾ ಈ ಪಟಿಂಗ್ ಅಬ್ದುಲ್ಲಾನ (ಅರ್ಥಾತ್ ನನ್ನ ಪ್ರಕಾರ ಚಿಲ್ಟು!) ಹಾಗೆ ಶುರು ಮಾಡಿ ಈಗ ಅಲ್ಲಾನ ಕೃಪೆಯಿಂದ ಈ

ಗಾಡಿಯ ಮಾಲಿಕನಾಗಿದ್ದೇನೆ'' ಎಂದಾಗ ತಟ್ಟನೆ ನೆನಪಾದದ್ದು ಚಿಲ್ಟುವಿನ ಗುಪ್ತ ಜೇಬುಗಳ ಶಕ್ತಿ!

''ಹಳ್ಳಿಗಳಲ್ಲಿ ಏನೆಲ್ಲಾ ಸಾಗಿಸಿಲ್ಲ ಈ ವಾಹನದಲ್ಲಿ'' ಎಂದು ಹೆಮ್ಮೆಪಟ್ಟ.

''ಹಳ್ಳಿಯಲ್ಲಿ ಕುರಿ, ಕೋಳಿ, ಮಾಂಸ, ಹುಲ್ಲು, ಸಗಣಿ, ಬೆಳೆ, ಕಳೆ... ಹೀಗೆ... ಹೇಳ್ತಾ ಹೋದ್ರೆ'' ಅಂದು, ''ಅವೆಲ್ಲ ಸಾಧಾರಣವಾಗಿ ಎಲ್ಲಾ ಟಕ್ಕರ್‌ಗಳೂ ಮಾಡುತ್ತವೆ. ನನ್ನ ವಾಹನ ಇನ್ನೂ ಇಸ್ಪೆಶಲ್! ಒಮ್ಮೆ ರಾಜಕಾರಣಿಯೊಬ್ಬರು ವಿಮಾನಾಘಾತದಲ್ಲಿ ಸತ್ತು ನನ್ನ ಹೊಲದಲ್ಲೇ ಬಿದ್ದಾಗ ಆ ಹವಾಯಿ ಜಹಾಜ್‌ನ ಮತ್ತು ಅವರ ಪಳೆಯುಳಿಕೆಗಳನ್ನು ಸಾಗಿಸಿದ್ದೇನೆ ಮೇಡಂ! ಇನ್ನೊಮ್ಮೆ ನಮ್ಮ ಹಳ್ಳಿಯ ಹೆಂಗಸೊಬ್ಬಳ ಹೆರಿಗೆ ಕಷ್ಟವಾಗಿ ಅವಳನ್ನು ತಾಲ್ಲೂಕ್ ಆಸುಪತ್ರೆಗೆ ರವಾನಿಸುತ್ತಿದ್ದಾಗ ಅರ್ಧ ದಾರಿ ಕಳೆದಿರಲಿಲ್ಲ, ಆಕೆ ಮುದ್ದಾದ ಗಂಡು ಮಗುವನ್ನು ಹೆತ್ತಳು, ಇದೇ ಸೀಟಿನಲ್ಲಿ ಮಲಗಿ'' ಎನ್ನುತ್ತಾ ಹಿಂದಿನ ಸೀಟನ್ನು ತೋರಿಸಿದ. ಎಷ್ಟು ಕಷ್ಟ ಸುಖ ಕಂಡಿದೆ. ಈ ವಾಹನ! ಈ ವೃದ್ಧಾಪ್ಯದಲ್ಲಾದರೂ ತನ್ನ ಕಡೆಯ ದಿನಗಳನ್ನು ಟಾರ್ ರೋಡಿನ ಮೇಲೆ ಸುಖವಾಗಿ ಕಳೆಯಲಿ, ಹಾಗೂ ನಾವೂ ಸ್ವಲ್ಪ ಸಿಟಿ ವಾಸನೆ ನೋಡೋಣ ಎಂದು ಈಗ ಇಲ್ಲಿಗೆ ಬಂದಿದ್ದೇವೆ! ಅಷ್ಟೇ'' ಎಂದಾಗ ಸತ್ನೋ ಬದುಕಿದ್ನೋ ಅಂತ ಇದ್ದಕ್ಕಿದ್ದಂತೆ ಇಳ್ಕೊಂಡೆ! ಗಡಿಬಿಡಿಯಲ್ಲಿ ಕೈಗೆ ಸಿಕ್ಕಿದಷ್ಟು ಹಣವನ್ನು ಅವನಿಗೆ ತೆತ್ತು ಪ್ರಾಣಭಯದಿಂದ ಪಾರಾದೆ! ಮನೆಗೆ ಇನ್ನೂ ಒಂದು ಮೈಲಾದರೂ ನಡೆಯಬೇಕಾಯಿತು. ಆದರೂ ಪರವಾಗಿಲ್ಲ ಎಂದು ನಡೆದೆ!



ಕಾಸಿಗೊಂದು ಸಮನ್ಸ್, ಮತ್ತೆ ಕೊಸರಿಗೆ?

• ಎಸ್ಪಾ ಮೂರ್ತಿ

(ಆಗಿರೋದಿಷ್ಟು....

ಟಾಟಾ ಇನ್ಸ್ಟಿಟ್ಯೂಟ್ ಫಿಸಿಕ್ಸ್ ಪ್ರೊಫೆಸರ್ ರಂಗಣ್ಣ, ಹೆಂಡತಿಯ ಬಲವಂತಕ್ಕೆ, ಅವಳೊಡನೆ ಹೈಸ್ಕೂಲು ಕ್ಲಾಸ್‌ಮೇಟಾಗಿದ್ದ ಗುಂಡ (ಗುಂಡೇಶ್ ದಡದಳ್ಳಿ)ನ ಟೀವಿ ಧಾರವಾಹಿ ಶೂಟಿಂಗಿಗಾಗಿ ಹಾಸನಕ್ಕೆ ಪಯಣಿಸಿದ. ಹಲವರ ಪರಿಚಯ. ಹೀರೋಯಿನ್ ಚಿಕ್ಕಿಗೆ ಜ್ವರವೇರಿ, ಸಿಕ್ಕ ಒಂದು ರಜಾದಂದು ಬೇಲೂರು ಯಾತ್ರೆ ಲಭ್ಯ. ಆ ದಿನ ಗುಂಡೇಶ್ ಯಾಲಕ್ಕಿ ಎಂಬ ಕೋಳಿ ಸಪ್ಲಯರ್ ಶಿಷ್ಯ, ಅವನ ಮಾವ ವಿಲೇಜ್ ಆಕೌಂಟೆಂಟನ ಕೃಪೆಯಿಂದ ರೂರಲ್ ಬರ್ತ್ ಸರ್ಟಿಫಿಕೇಟ್ (ಸುಳ್ಳು ಜಾತಕ) ಗಿಟ್ಟಿಸಿಕೊಂಡ.

ಹಠಾತ್ತಾಗಿ ಹೀರೋಯಿನ್ ಆಗಮಿಸಿ, ಮಾರನೆಯ ದಿನ ಶೂಟಿಂಗ್ ತಯಾರಿ. ರಂಗಣ್ಣ ಮೊದಲ ಸೀನಿಗೇ ಇಹಲೋಕ ತ್ಯಜಿಸುವ ಮುದುಕ ಶ್ರೀಮಂತನ ಪಾತ್ರಕ್ಕೆ, ಅವನ ಹೆಂಡತಿಯಾಗಿ ಸರಸೂ, ಜೀವ ಕಳೆತುಂಬಿ ಅಭಿನಯಿಸುತ್ತಾರೆ. ಅವರ ಪಾತ್ರಗಳ 'ಹರವು' ಅಷ್ಟಕ್ಕೇ ಮುಗಿದು, ಬೆಂಗಳೂರಿಗೆ ಮರಳಲು ವೀಸಾ ಪ್ರಾಪ್ತಿ, ಖೇದ. ಒಂದು ದಿನ ಬಂಧು ಸುನಂದಳ, ಅವಳ ಪತಿ ವಿಜ್ಞಾನಿ ರಘುವಿನ ಮನೆಯಲ್ಲಿ ಕಳೆಯಲು ಅವಕಾಶ. ಊರಿಗೆ ಮರಳಿದರೂ ಸಮಾಜ ದರ್ಶನಕ್ಕೆ ಸರಸೂ ಮುಜುಗರ. ಅಷ್ಟರಲ್ಲಿ ಪೋಲೀಸನೊಬ್ಬ ತಂದಿತ್ತ ರಂಗಣ್ಣಗೆ ಕೋರ್ಟ್ ಸಮನ್ಸು... ಮುಂದಕ್ಕೋದ್ಕಳಿ.)

ದೂರವಾಣಿಯ ಕರೆ ಗುಂಡನೆಂದು ತಿಳಿದಾಕ್ಷಣ ರಂಗಣ್ಣನ ಮಂಜುಗೆಡ್ಡೆಯಂತಹ 'ಟೆಂಪರ್'ಗೂ ಸಹ ಸ್ವಲ್ಪ ಶಾಖವೇರಿತು. ವಲ್ಗರಿನ ಕಲ್ಚರ್ ಅವನಲ್ಲದ್ದರಿಂದ ಸ್ಥಿತಪ್ರಜ್ಞನಾಗಿ ಮಾತಾಡಲು ಅವನಿಗೆ ಸಾಧ್ಯವಾಯಿತು. ಅವನು ಬಾಯಿ ಬಿಡುವುದರಲ್ಲಿ ಗುಂಡ ಬಿಡದೆಯೇ ಬಡಬಡಿಸುತ್ತಲೇ ಇದ್ದ.

'ಎಂಗಿದೀಯ ಗುರೂ... ನಾವೆಲ್ಲ ಎಲ್ಡು ದಿನ ಬೇಲೂರಾಗೆ ಸೂಟಿಂಗ್ ಮಾಡಿಕೊಂಡೋ. ದೇವರ ಗುಡೀದು ಕಲ್ಲು ಮಾಡಲ್ಲುಗಳನ್ನ ನೋಡಿ ಆ ಲೌಡಿ ಮಾಯಾ 'ಸಂದೂ ಡ್ಯಾನ್ಸ್ ಪೋಜ್ ತಕಳ್ರೀ ಅಂದ್ಲು... ಅದ್ರಾಗೂ ಮೂನ್‌ಲೈಟ್‌ನಾಗೆ. ಬಾರಿ ಸುಸ್ತಾಗಿಬುಟ್ಟೋ ಗುರು... ಆಗಲೂ ರಾತ್ರೀ ಸೂಟಿಂಗ್ ಮಾಡಿ....'

'ಅದ್ಸರಿ ಕಣೋ ಗುಂಡಾ, ಆದರೆ ನಿನ್ನ ಕೇಸಿಗೆ ನಾನು ಕೋರ್ಟಿಗೆ ಹನ್ನೆರಡನೇ ತಾರೀಖು ಬರಬೇಕು ಅಂತ ಸಮನ್ಸೋ ವಾರಂಟೋ ತಂದಿರೋ ಪೋಲೀಸಿನೋನು ಇನ್ನೂ ಬಾಗಿಲಲ್ಲೇ ನಿಂತಿದಾನಲ್ಲಯ್ಯಾ! ಏನಿದು - ಕೋರ್ಟು ಕಚೇರಿ ವ್ಯವಹಾರ ನಿಂದು?'

'ಆಗ಼್್ಲೇ ಬಂದ್ಬುಟ್ಟಾನಾ ಗುರೂ? ಅನ್ಕೊಂಡ್ಕೊಂತಾ... ಈಗ ನಾನು ನಿಂಗೆ ಫೋನ್ ಮಾಡಿದ್ದೇ ಅದ್ಕೆ... ಏನೂ ಬಯಬೀಳ್ಬೇಡ ಗುರು, ಅದೂ... ಸೂಟಿಂಗಿಂದ ವಾಪಸ್ ಬಂದಾಗ ನನ್ಮಗ ಆ ಸಿದ್ಲಿಂಗು ಏನೋ ತಲಲ್ಟೆ ಮಾಡ್ದ... ಎಲ್ಡು ಬಿಟ್ಟೆ ನೋಡು ಸರ್ಯಾಗಿ... ದವ್ಡೇ ಉಬ್ಬರಿಸ್ಕತ್ತು ನನ್ಮಗುಂಗೆ... ಅವ್ನು ಯೂನಿಯನ್ ಮೆಂಬ್ರುಕಣಪ್ಪಾ!

'ಅಂದ್ರೆ ಟೀವಿ ಕೆಲಸಗಾರರ ಯೂನಿಯನ್ನಾ?'

'ಊಂ ಗುರೂ... ಎಲ್ಲಾರ್ನೂ ಎತ್ತಿ ಕಟ್ತಾರೆ ತರ್ಲೇ ನನ್ಮಕ್ಳು, ಅವರ ಸಪೋಲ್ಟು, ಇವ್ನು ಕೇಸ್ ಓಗವ್ನೆ... ಮದ್ಲಿಗೂ ನಾಕೈದು ಕಿತಾ ಆಗಿತ್ತು ಬಿಡು..... ನೀ ಎದರ್ಕ್ಕೋಬೇಡ... ನಾ ಎಲ್ಲಾ ಸುದರಾಯಿಸ್ತೀನಿ.... ಅವತ್ತೊಂದಿನ ಮಾತ್ರ ಸೊಲ್ಪ ಕೋರ್ಟಿಗೆ ಬಂದ್ಬುಡು ಗುರು, ತಪ್ಪಿಸ್ಕಾಬ್ಯಾಡ. ಆಮೇಲೆ ನೋಡ್ತೀನಿ ನಿನ್ನ... ಕೋರ್ಟ್ನಾಗೆ' ಫೋನು ಕಟ್ಟಾಯಿತು.

'ರೀ, ಸ್ವಾಮೀ.... ಇನ್ನೂ ಅರವತ್ತು ಪಾರ್ಟಿಗೊಳ್ಗೆ ಸಮನ್ ಕೊಡಬೇಕ್ರೀ... ಇವತ್ತೇಯ, ನನ್ನ ಕಳುಸ್ಕೊಡಿ ಬೇಗ' ಪೋಲೀಸಿನವನು ಕರ್ತವ್ಯ-ಶ್ರದ್ಧೆಯಿಂದ ಬೊಮ್ಡಿ ಚಚ್ಚಿಕೊಂಡ.

'ಸೈನ್ ಮಾಡಿ ಕೊಟ್ಟಿದೀನಲ್ಲಪ್ಪಾ.... ನೀ ಹೋಗಬಹುದು ಇನ್ನು...'

'ನಿಮ್ಮಂತೋರೇ ಅಂಗಂದ್ರೆ ಎಂಗೆ ಸಾರ್.... ಜಂಟ್ಲ್‌ಮೆನ್‌ಗಳು.... ತರ್ಲೇಗುಳೇ ಕಾಪಿ ತಿಂಡಿ ಕರ್ಚು ಕೊಡ್ತಾರೆ.'

ಕೋರ್ಟ್ ಸಮನ್ಸ್‌ಗಳನ್ನು ಕಾಸಿತ್ತು ಕೊಳ್ಳಬೇಕೆಂಬ ಸತ್ಯ ರಂಗಣ್ಣನಿಗೆ ನಿಧಾನವಾಗಿ ಹೊಳೆದರೂ, ಅವನಷ್ಟೇ ಗಾಬರಿಯಾಗಿದ್ದ ಸರಸೂ ತೀಕ್ಷ್ಣಮತಿಯಿಂದ 'ಏನಾರೂ ಕೊಟ್ಟು ಕಳಿಸಿಬಿಡೀಂದ್ರೆ ಬೇಗ... ಯಾರಾರೂ ನೋಡಿಬಿಟ್ಟಾರು' ಎಂದು ಸರಿಯಾಗಿ ಅರ್ಥೈಸಿದಳು.

'ಇದೇನೇ ಈ ಖರ್ಚು!... ಎಷ್ಟೇ ಕೊಡೋದು ಇವನಿಗೆ?'

'ನನ್ನೇನು ಕೇಳ್ತೀರಿ... ಅವನ್ನೇ ಕೇಳಿ... ಇಲ್ಲಾ ಒಂದು ಹತ್ತೋ ಇಪ್ಪತ್ತೋ ಕೈಗೆ ಹಾಕಿ ಅಟ್ಟಿ ಮೊದಲು.'

ರಂಗಣ್ಣನ ಕೈ ಹತ್ತು ರೂಪಾಯಿ ನೀಡಲು ಮುಂದಾದಾಗ, ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ಲನ ಜೀವನದ ಕಷ್ಟ ಕಾರ್ಪಣ್ಯಗಳೆಲ್ಲ ಅವನಿಗೆ ಅರಿವಾಗತೊಡಗಿದುವು.

'ಸರ್ಕಾರದಿಂದ ಲಭ್ಯವಾದ ಬೆದರುಗೊಂಬೆಗಳ ಸೃಜಿಸ ಬಾಕಿ ಅರಿವಗಳನ್ನೂ, ಅವರೇ ಇತ್ತ ಒಂದು ಕಾಲಿಗೆ ಹತ್ತು, ಒಂದಿ ಕಾಲಿಗೆ ಎಂಟು

ಸೈಜಿನ ಬೂಟುಗಳನ್ನು - ಒಮ್ಮೊಮ್ಮೆ ಎರಡೂ ಎಡಗಾಲಿನವು ಅಥವಾ ಎರಡೂ ಬಲಗಾಲಿನವೇ ಆಗಿರುತ್ತ - ಧರಿಸಿ, ಬಾಲ ಅಲ್ಲಾಡಿಸದೆ - ಅಲ್ಲಾಡಿಸಿದರೆ ಎಸ್ಪೈ ಕೈಲಿ 'ಎಲ್ಯೆ ವಿಧವಾ ನಂದನನೇ, ನಿನ್ನ ಕಾಲೇ ಸೊಟ್ಟವೆ, ಕೇಳ್ಳೆ ವೇಶ್ಯಾಪುತ್ರನೇ, ಈ ಬೂಟು ಆಕ್ದೇ ಇದ್ರೆ ಸರ್ವಿಸ್ನಿಂದ ಡಿಸ್‌ಚಾರ್ಜ್ ರೆಕಮೆಂಡ್ ಕೊಟ್ಟೇನು' ಎಂದು ಉಗಿಸಿಕೊಂಡು.....'

'ಒಂದೇ ಸೆಟ್ಟಾ ನಿಮಗೆ ಯೂನಿಫಾರಂ ಕೊಡೋದು?'

'ವರ್ಸಕ್ಕೆ ಎಲ್ಡು ಕೊಡ್ತಾರೆ ಸಾರ್... ಅದರಲ್ಲಿ ಒಂದ್ಸೆಟ್ನ ಯಾವಾಗ್ಲೂ ಪಿಲಂನೋರ್ಗ್ಳೋ ಟೀವೀನೋರ್ಗ್ಳೋ ಬಾಡಿಗೆ ಒಡೀತೀವಿ. ಪಾಪ, ಕಲಾವಿದರು ಉಪೇಗಿಸ್ಕಳ್ಳಿ ಅಂತ... ಅಲ್ದೇ ವಾಪಸ್ ಕೊಡೋವಾಗ ಧೋಬಿ, ಇಸ್ತ್ರೀ ಆಕ್ಸೇ ಕೊಡ್ಬೇಕು ಅಂತ ಏಳಿರ್ತೀವಿ. ಜೀವಣ ನಡೀಬೇಕಲ್ಲ ಸಾರ್...'

ಒಬ್ಬ ಕಾನೂನು ಪಾಲಕನ ಈತಿ ಬಾಧೆಗಳ ಮುಂದೆ ತನ್ನ ರೀಸರ್ಚ್ ಪ್ರಾಬ್ಲಮ್ಮುಗಳು ಕೇವಲ ಗೌಣವೆಂದು ರಂಗನಾಥನಿಗೆ ಅರಿವಾಯಿತು. ಪೋಲೀಸ ಮುಂದುವರೆಸಿದ:

'ಆ ನನ್ಮಕ್ಳೋ... ನಾಕು ನಾಕು ದಿನ ಬೇವರ್ಸಿಗಳಿಗೆಲ್ಲಾ ತೊಡಿಸಿ ಕೊನೇಲಿ ಧೋಬೀಗೇ ಆಕ್ದೆ ಎಲ್ಡು ರೂಪಾಯ್ನಾಗೆ ಬರೇ ಇಸ್ತ್ರೀ ಮಾಡ್ಸಿ ರಿಟರ್ನ್ ಕೊಡ್ತಾರೆ. ಮತ್ತೆ ಅವನ್ನೇ ದಿನಾ ಅನ್ನೆಲ್ಡುಗಂಟೆ ಡೂಟಿಮ್ಯಾಗೆ ಆಕ್ಕಬೇಕು. ವಾಸ್ನೆ ಅತ್ತಿ ಬ್ಯಾಗ ಅವಸ್ತೆ ಆಯ್ತವೆ. ಗುಜರೀಗೆ ಆಕಾಣಾ ಅಂದ್ರೆ ಅಲ್ಲೀ ನನ್ಮಕ್ಳು 'ಸಿವಿಲ್ ಬಟ್ಟೆ ಕೊಡ್ರಿ, ನಿಮ್ಮಂತೋರ ಬಟ್ಟೇಗಿಂತ ಕಾರ್ಪೊರೇಸನ್ ಪೂರ್ (ಪೌರ?) ಕಾರ್ಮಿಕರ ಕಾಕೀನೇ ವಾಸಿ... ಸೇಲಾಗ್ತವೆ' ಅಂತಾರೆ.'

ರಂಗಣ್ಣನಿಗೆ 'ನೈನಂ ಛಿಂದಂತಿ...' ಭಗವಾನ್ ಉವಾಚ ನೆನಪಾದರೂ ತನ್ನ ವಾಚೂ ನೋಡಿಕೊಂಡ.

'ಅಲ್ಲಪ್ಪಾ, ನೀನು ಇನ್ನೂ ಅರುವತ್ತು ಜನಕ್ಕೆ ವಾರಂಟ್ ಕೊಡಬೇಕು ಅಂದ್ಯಲ್ಲಾ?

'ಇರ್ಲಿ ಸಾರ್, ನಮ್ಮ ಕಸ್ಟಾ ಏಳ್ಕಂಡ್ರೆ ನಿಮ್ಮಂತೋರು ಕೇಳ್ತೀರಿ. ನೀವೇ ನೋಡಿ, ಈ ಅರುವತ್ತು ಪಾಲ್ಟಿ ಮನೇಗೂ ನಾಯಿ ತರ ಗಲ್ಲಿಗಲ್ಲಿ ಸುತ್ತಿ, ನಾಯಿಗಳ ಕೈಲೂ ಬಡಿದಾಡಿ... ನಿಮ್ದೇನೋ ಅಡ್ರೆಸ್ ಐತೆ... ಈ ಸ್ಲಂನೋರ್ಗೆ ನಂಬರ್ ಎಲ್ಬಂತು ಸಾರ್!.... ಯಾವ ಗುಡ್ಲು ಉಡಿಕ್ಕಂಡು ಓದ್ರೂನೂವ ನಂಬರ್ ಇರ್ಲಿ ಮೂರುನಾಮಾನೋ, ಈಬೂತಿ ಪಟ್ಟೆ ಈಸ್ವರಾನೋ, ಇಲ್ಲಾ ಪ್ಲಸ್‌ಮಾರ್ಕೋ ಆಕಿರ್ತಾರೆ. ಯಾರ ಮನೇಗೋಗಿ ಎಸ್ರು ಕೇಳಿದ್ರೂ 'ಮಣಿ'

ಅಂತಾರೆ. ಮೊನ್ನೆ ಒಂದು ಸ್ಲಂನಾಗೆ ಆದಿನಾರು ಮಣೆ ಇದ್ರು. ಇಬ್ರಿಗೆ ಸಮನ್ಸು. ಯಾರನ್ನ ಕೇಳಿದರೂ ತಗೋವಲ್ಲ!'

'ತಮಾಷೆಯಾಗಿದೆ.... ನೀನೇನಪ್ಪ ಮಾಡ್ದೆ?'

'ಬೇಜಾರಾ ಆಗಿ ಒಂದು ಪ್ಲಾನ್ ಮಾಡ್ದೆ ಸಾರ್... ಸಿವಿಲ್ ಬಟ್ಟೀನಾಗೆ ಮೂರ್ನೆ ದಿನ ಓಗಿ ನಿಮ್ಗೆಲ್ಲಾ ಬಿಟ್ಟಿ ಸೈಟು ಕೊಡ್ತಾರೆ ಅರ್ಜಿ ಗುಜರಾಸ್ಕೊಳಿ, ಈ ಪಾರಂ ತಗೊಂಡು ಎಸ್ರು ಬರ್ಕೊಡಿ ಅಂದ್ರೆ, ನಸ್ಮಕ್ಳು ಇಪ್ಪತ್ಮೂರು ಜನಾ ಮಣಿ ಅಂತ ಸೈನಾಕಿ ತಕಂಬುಟ್ರು. ಒಬ್ಬೊಬ್ಬನ ತಾವನೂ ಇನ್ನೂರು ಇನ್ನೂರು ಕಿತ್ತೆ ಅನ್ನಿ.'

'ನಿನ್ನ ಹತ್ರ ಎರಡೇ ಅಲ್ವಾ ಸಮನ್ಸ್ ಇದ್ದದ್ದು?'

'ಔದು, ಸಾರ್ ಎಲ್ಲಾರ್ಗೂ 'ಮಣಿ ಸನ್ ಆಫ್ ಮಣಿ' ಅಂತಾನೇ ಇದ್ದೋ ಅಡ್ರೆಸ್ ಮಾತ್ರ ಬ್ಯಾರೆ. ನಾನು ಜೆರಾಕ್ಸ್ ಒಡೆಸಿ ಇಪ್ಪತ್ಮೂರು ಜನಕ್ಕೂ ಜಾರಿ ಮಾಡ್ದೆ. ಅದೂ ಅಲ್ದೆ ಯಾವ ನನ್ಮಗಾನೂ ಕೋರ್ಟಿಗೆ ಬರಾಕಿಲ್ಲ ಅಂತಾನೂ ಗೊತ್ತು ಸಾರ್. ಅದ್ಕೇ ಒಂದು ಸಮನ್ನಿಗೆ ಇನ್ನೂರು ಗಿಟ್ತು.'

ಸ್ಲಮ್ಮಿನ ಮಣಿಗಣಗಳೇ ಇನ್ನೂರು ತೆತ್ತಮೇಲೆ ನನ್ನಂತಹ 'ಜೆಂಟ್ಲ್‌ಮೆನ್ಸ್' ಒಬ್ಬ ಹತ್ತರ ಸೋಟಿತ್ತಲ್ಲಿ, ಅದು 'ಬೂಮೆರಾಂಗಿ'ನಂತೆ ತನ್ನ ಮುಖದತ್ತವೇ ಪುಟಿಯುವುದರಲ್ಲಿ ಸಂದೇಹವೇ? ರಂಗಣ್ಣನಿಗೇನೂ ಸೈಟು ಬೇಕಾಗಿರಲಿಲ್ಲ; ಆದರೂ ಸರಸೂನ ಕೇಳಿ ಇನ್ನೂರು ರೂಪಾಯಿ 'ಮಿನಿಮಂ' ಕಟ್ಟಿದಾಗ - ಪಾಪ, ಕಾರ್ಪಣ್ಯಗಳಿಂದ ನೊಂದು ಬೆಂದ ಆ ಶಾಂತಿಪಾಲಕ ಕೊತವಾಲನ ಚೆಹರೆಯ ಮೇಲೆ ಕಿರುನಗೆ ಸೂಸಿತು, ಅವನ ವೀರ(ಪ್ಪ) ಮೀಸೆಯ ಕೆಳಗೆ ದಂತದ ಸಾಲು ಸಾಲೇ ಗೋಚರಿಸಿದುವು.

'ಎಲ್ರೂ ನಿಮ್ಮಂಗಿರಾಕಿಲ್ಲ ಸಾರ್' ಎಂದು ಸ್ಮಾರ್ಟ್ ಸೆಲ್ಯೂಟಿತ್ತು ಪ್ಯಾದೆ ಅಬೌಟ್‌ಟರ್ನಾದ.

ಅರುವತ್ತು ಸಮನ್ಸ್; ತಲಾ ಇನ್ನೂರು... ಕೆಲವು ಎರಡರಿಂದ ಇಪ್ಪತ್ಮೂರು! ಆದರೆ 'ಹಿಟ್ ಅಂಡ್ ಮಿಸ್' ಗಳೆಷ್ಟೋ! ಅಲ್ಲದೆ ಡಿಸ್ಕೌಂಟ್ ಬೇರೆ... ಈ ಡ್ಯಾಟಾಗಳನ್ನು ಫೀಡ್ ಮಾಡಲಾಗದೆ ರಂಗಣ್ಣನ ಮೆದುಳ ಜಿಗಾಬೈಟುಗಳು ಖಾಲಿ ಸ್ಕ್ರೀನಷ್ಟೆ ತೋರಿದುವು.

ಸರಸು ದಿಗ್ಭ್ರಾಂತಳಾಗಿ ವಿಚಾರಿಸಿದಳು: 'ಏನೂಂದ್ರೆ... ಏನೂ ತೊಂದ್ರೆ ಇಲ್ಲ ತಾನೇ?'

'ಹನ್ನೆರಡನೇ ತಾರೀಖು ಗೊತ್ತಾಗುತ್ತೆ' ಎಂದ ರಂಗಣ್ಣ.

'ಇದೆಲ್ಲೀ ಸಾಪಾಸಾಸಪ್ಪ!.... ದೇವ್ರೇ, ಹನ್ನೆರಡನೇ ತಾರೀಖು ಸುಖವಾಗಿ ಕಳೆದುಹೋದರ ಪಂಚಾಮೃತ ಅಭಿಷೇಕ ಮಾಡಿಸ್ತೀನಿ ಹದಿಮೂರಕ್ಕೆ' ಎಂದು ವೆಂಕಟರಮಣನನ್ನು ನೆನೆದಳು. ಮತ್ತೆ ಫೋನು ರಿಂಗಾಯಿತು.

ಈ ಸಲಿ ಸಮಸ್ಸು ಸರಸೂಗೇಯ! 'ಇವತ್ತು ಸಮಾಜದಲ್ಲಿ 'ಪಾಟ್‌ಲಕ್' ಪಾರ್ಟಿ, ಒಂದಿಪ್ಪತ್ತು ಜನಕ್ಕೆ ಏನಾದರೂ ಡಿಷ್ ಮಾಡಿಕೊಂಡು ತಪ್ಪದೆ ಬನ್ನಿ' ಅಂತ ಸೆಕ್ರೆಟ್ರಿ ಜಯಕೀರ್ತಿ ಆದೇಶಿಸಿದಳು. ಅವಳ ಒಂದೇ ಲೈನು ಲಕ್ಷ್ಮಣ ರೇಖೆಯಂತೆ, ಮೀರಲಾಗದು. ಸರಸೂ ಎದೆಯಲ್ಲಿ ಅವಲಕ್ಕಿ ತಯಾರಾಗತೊಡಗಿತು. 'ನೂತನ ಸಂಪಾದಿತ ತಾರಾಲೋಕ ವಿಹಾರದ ವಿವರಗಳನ್ನು ಕೇಳಿದರೆ - ಆ ದಿನದ ಮುಖ್ಯ ಅಜೆಂಡಾ ಕೂಡಾ ಅದೇ ಎಂದು ತಿಳಿದೂ ಸಹ - ಸರಸುವೆಂಬ ಈ ತರಾಕುರಿ ಉತ್ತರಿಸುವುದೇನು? ಗಂಡ ಹೆಣದ ಪಾರ್ಟು, ತಾನು ಕ್ಯಮರಾ ಎದುರಿಸಿದ ಕ್ಷಣವೇ ಮುತ್ತೈದೆತನ ಕಳೆದುಕೊಂಡು (ಬಿಡ್ತು ಅನ್ನಿ) ಗೋಳಾಡುವ ಸುಂದರ ಪಾತ್ರಧಾರಿ ಎಂದು ವಿವರಿಸಬೇಕೇ! 'ನೀನೇಕಾಗಲಿಲ್ಲ ಹರಹರಾ, ಶ್ರೀ ದಡದಳ್ಳೀ ಭಂಡ ಗುಂಡೇಶ್ವರಾ!' ಎಂದವಳು ಹಲುಬಿ ಹಲ್ಲುಕಚ್ಚಿ ಪರಿತಪಿಸಿದಳು.

ವಾಸ್ತವವಾಗಿ ಸರಸು ಅಷ್ಟೇನೂ ಗಾಬರಿಯಾಗಬೇಕಾದ ಅವಶ್ಯಕತೆ ಇರಲಿಲ್ಲ. ಅವಳ - ನವತಾರೆಯ - ಮೊದಲ ಮುಖದರ್ಶನ ಮೆಂಬರಿಗಳಲ್ಲಿ ಅಸೂಯಾಭರಿತ ಕುತೂಹಲವನ್ನಷ್ಟೇ ಕೆರಳಿಸಿದ್ದು, ಪಾತ್ರ ಕಿರುತೆರೆಯ ಮೇಲೆ ಮೂಡಿ ಬಂದ ನಂತರವಷ್ಟೇ ಅವರಿಗೊಂದು 'ಗೇಲೀಬಾರ್' ಮಾಡುವ ಅವಕಾಶ ಲಭಿಸುವುದು? ಇಂದಿನ 'ಪ್ರಿ-ವ್ಯೂ'ನಲ್ಲಿ ಎಲ್ಲೆಡೆಯಿಂದ ಪ್ರಶ್ನೆಗಳೆಂಬ ಬಾಣಗಳ ಸುರಿಮಳೆಯಾದರೂ ಸರಸು ಹೆಚ್ಚಿಗೆ Commit ಮಾಡಿಕೊಳ್ಳದೆ ಸ್ವಲ್ಪ ಬಿಗುಮಾನದಿಂದಲೇ ಉತ್ತರಿಸಿ 'ಶೂಟಿಂಗ್ ಇನ್ನೂ ಬಾಕಿ ಇದೆಯೆಂದೂ ಆಮೇಲೆ ಎಡಿಟಿಂಗ್, ಡಬಿಂಗ್ ಇತ್ಯಾದಿಗಳು ಮುಗಿದ ಮೇಲೆಯೇ ಸೀರಿಯಲ್ಲಿನ ಬಿಡುಗಡೆ' ಎಂದೂ ಹೇಳಿ ತಾರಾಸೌಧವನ್ನು ಯಶಸ್ವಿಯಾಗಿ ರಕ್ಷಿಸಿಕೊಂಡಳು - ಅಥವಾ ಯಶಸ್ವಿಯಾಗಿ ಪಂದ್ಯವನ್ನು ಮುಂದೂಡಿಕೊಂಡಳು. ಅವಳ ರುಚಿಕರ ಕೃತಿ ಗೊಜ್ಜವಲಕ್ಕಿ ಹಲವರ ನಾಲಿಗೆಗೆ ಸೂಕ್ತ ಪರ್ಯಾಯವಾಗಿ ಪರಿಣಮಿಸಿ ಸರಸುವನ್ನು ಕಂಠಪೂರ್ತಿಯಾಗಿ ಹೊಗಳಿದರು, ತೃಪ್ತ ಮೆಂಬರಿಗಳು.

ಆದರೂ ಸೊಟ್ಟ ಮುಸುಡಿ ಜಯಾ ಯಾರಿಗೋ 'ರೀ ನಿರ್ಮಲಾ, ಆ ಸರಸು ಜಂಭ ನೋಡಿದಿರೇನ್ರೀ? ಏನೋ ಬಿಗುಮಾನ ಮಾಡ್ತಾಳೆ ಮಾತಾಡೋವಾಗ, ಮಹಾ, ಇವಳೊಬ್ಬಳೇ ಟೀವಿಸ್ಟಾರೇನೋ... ಈಗೇನೋ

ಇಂಥಾ ಜನ ಕಾಸಿಗೊಂದು, ಕೊಸರಿಗೊಂದು, ಅಷ್ಟು ಚಾನಲ್ ಬಂದ್ಬಿಟ್ಟಿವೆ. ಏನೋ ತೋರಿಸ್ಕೋತಾಳೆ' ಎಂದದ್ದು ಕೇಳಿಸಿಕೊಂಡಳು ಸರಸು. ಅಷ್ಟು ಸಾಲದೆ ಹತ್ರ ಬಂದು:

'ಅಲ್ರೀ ಸರಸೂ, ... ನಿಮ್ಮ ಸೀರಿಯಲ್ಲು ಗ್ಯಾರಂಟಿ ಬರುತ್ತೆ ತಾನೇ? ಈಚೆಗೆ ಎಷ್ಟೋ ಧಾರಾವಾಹಿಗಳನ್ನ ಹೇಳ್ದೆ ಕೇಳ್ದೆ ಅಷ್ಟಿಷ್ಟು ಎಪಿಸೋಡು ಮಾಡಿ ನಿಲ್ಸೇ ಬಿಡ್ತಾರೆ. ನಮ್ಮಂಥಾ ರೆಗ್ಯುಲರ್ಸ್‌ಗೆ ತುಂಬಾ ತೊಂದ್ರೆ. ಸ್ಟೋರಿ ಫಾಲೋ ಮಾಡೋಣಾಂದ್ರೆ, ಬದ್ಲಿಗೆ ರವಿಚಂದ್ರನ್ನೋ ಶಿವರಾಜೋ ನಲವತ್ತು ಜನರ ಜೊತೆ ಕುಣೀತಾ ಬರ್ತಾರೆ! ನಾವು ಏನು ಫಾಲೋ ಮಾಡೋದು? ನಿಮ್ಮದೂ...'

ಸರಸೂಗೆ ಈ ಅಲಿಗೇಷನ್ ತಡೆಯಲಾಗಲಿಲ್ಲ. ಅವಳು:

'ಅಯ್ಯೋ... ಈ ಪ್ರೊಡಕ್ಷನ್ನಿನೋರು ಹಾಗೆಲ್ಲಾ ಅಲ್ಲ... ಇನ್ನೂ ಶೂಟಿಂಗ್ ಮುಗಿದಿಲ್ಲ ಅಷ್ಟೇಯ. ಒಂದು ಸಲ ಶುರು ಮಾಡಿದರೆ ಕೊನೇ ಮುಟ್ಟಿಸಿಯೇ ಸಿದ್ಧ' ಎಂದು ಗುಂಡನ ಯೂನಿಟ್ಟನ್ನೂ ಸಹ Defend ಮಾಡುವ ಧೈರ್ಯ ತಳೆದಳು. ಆದರೆ ಒಳಗೆ ಮಾತ್ರಾ 'ಈ ಸೀರಿಯಲ್ಲು ತಮ್ಮ ಎಪಿಸೋಡು ತಲಪುವ ವೇಳೆಗೆ ನಿಂತೇ ಹೋದರೆ, ಆದದ್ದೆಲ್ಲಾ ಒಳಿತೇ ಆಯಿತೇ!' ಎಂದುಕೊಳ್ಳುವ' ಎಂಬ ಕೆಟ್ಟ ಧೈರ್ಯ ತಂದುಕೊಂಡಳು.

ಏನಿಲ್ಲವೆಂದರೂ ಈ ಪಾಟ್‌ಲಕ್ ಪಾರ್ಟಿಯಿಂದ ಸರಸೂ ಮನಸ್ಸಿನ ಬಿಗಿತ ಸ್ವಲ್ಪ ಸಡಿಲಗೊಂಡಿತು. ಕೆಲಸದಿಂದ ಸಕಾಲಕ್ಕೆ ಮರಳಿದ ರಂಗಣ್ಣನಿಗೆ ಸಮಾಜ ದರ್ಶನದ ವಿವರಗಳನ್ನು ಸೂಪರ್ ಗೊಜ್ಜವಲಕ್ಕಿ ಜೊತೆ ಉಣಬಡಿಸಿದಳು. ಅವನು 'ಹೀಗಾಗುತ್ತೆ ಅಂತ ನನಗೆ ಗೊತ್ತಿತ್ತು' ಎಂದು ನಸುನಕ್ಕ.

'ನೀವು, ಪಾಪ, ಮೊದಲೇ ಬೇಡ ಅಂದ್ರಿ ಕಣ್ರೀ... ನಾನೇ ಬಲವಂತ ಮಾಡಿ ಸೀರಿಯಲ್ಲಿಗೆ ಕರ್ಕೊಂಡು ಹೋದದ್ದು... ಇನ್ಮೇಲೆ ಶೂಟಿಂಗೂ ಬೇಡ, ಲೊಕೇಷನ್ನೂ ಬೇಡ... ಹಾಯಾಗಿ ಸಮಾಜಕ್ಕೆ ಹೋಗಿ ಕಾಲ ಕಳೆಯೋದೇ ವಾಸಿ' ಎಂದು ಪಶ್ಚಾತ್ತಾಪ ಪಟ್ಟಳು.

'ಅಲ್ವೇ ಮತ್ತೆ? ಯಾವುದೋ ಬೇರೆ ಕುರಿ ಹಿಡಿದು ಹಳ್ಳಕ್ಕೆ ಬೀಳಿಸೋದು ಹೆಚ್ಚು ಸುಲಭ' ರಂಗಣ್ಣ ನಗೆಯಾಡಿದ, 'ಅಂತೂ ದ್ರಾಕ್ಷಿ ದಕ್ಕದ ನರಿ ಆದೆ ನೀನು!'

ಆ ವೇಳೆಗೆ ಮನೆಯ ಬಾಗಿಲ ಗಂಟೆ ರಿಂಗಾಯಿತು. 'ಇನ್ನು ಯಾವ ಅಪಾಯ ಸ್ಥಳಕ್ಕೆ ಸಮನ್ಸ್ ಕಾದಿದೆಯೋ' ಎಂದುಕೊಂಡು ಎದ್ದುಹೋಗಿ ಬಾಗಿಲು ತೆಗೆದಾಗ 'ನಮಸ್ಕಾರ, ಸಾರ್' ಎಂದು ಅವನನ್ನು ಒಕ್ಕೊರಲಿಂದ ಗ್ರೀಟ್ ಮಾಡಿದರು, ಶಿವಾಜಿ, ಶೇಖರ ಹಾಗೂ ಪಟ್ಟೀ ರಾಮಚಂದ್ರ!

ಕಾಲಃ ಕ್ರೀಡತಿ ಗಚ್ಛತ್ಯಾಯುಃ

• ಬಿ. ನಾಗೇಂದ್ರ

''ಏನು? ಹೇಗಿದೀರಿ? ಬಹಳ ದಿವಸವಾಯ್ತು ನೋಡಿ'' ಮನೆ ಮುಂದೆ ಹೋಗ್ತಿದ್ದ ಪಾರ್ವತಮ್ಮನ್ನ ಪದ್ದಮ್ಮನವರು ಕೇಳಿದರು.

''ಅಯ್ಯೋ! ಏನು, ಸೂರ್ಯ ಹುಟ್ಟುತ್ತಾನೆ! ಬೆಳಕಾಗತ್ತೆ! ಸೂರ್ಯ ಮುಳುಗುತ್ತಾನೆ! ಕತ್ತಲಾಗತ್ತೆ! ದಿನಗಳು ಬರುತ್ವೆ! ಹೋಗತ್ವೆ!'' ಅಂತ ಅರಬೇಸರದಿಂದ ಉತ್ತರಿಸಿದರು. ಪಾರ್ವತಮ್ಮ.

''ಅಲ್ರೀ! ಸೂರ್ಯ ಬರೋದು ಹೋಗೋದು ಗೊತ್ತಾಗ್ತಿದೆ! ಅದನ್ನ ನೋಡ್ತಾ ಕಾಲ ಎಣಿಸೋದು ಎಷ್ಟು ಸುಖಾರೀ!'' ಅಂದಳು ಪದ್ದಮ್ಮ.

''ಅದೇನು ಸುಖಾನೋ ನಂಗೊತ್ತಿಲ್ಲಪ್ಪಾ!'' ಪಾರ್ವತಮ್ಮನವರಿಗೆ ದಿನದ ಕೆಲಸದ ಒತ್ತಡ.

''ಸೂರ್ಯ ಬಂದ ಹಾಗೆ ಒಂದು ದಿನ, ಸೂರ್ಯನ ಮಗನೂ ಬರ್‍ತಾನ್ರಿ ಒಂದು ದಿವಸ! ಅವತ್ತು ನೋಡೀ ಬಲು ಕಷ್ಟ!'' ಎಂದಳು ಅಂತರ್ಮುಖಿಯಾದ ಪದ್ದಮ್ಮ.

ಆ ಮಾತು ಪಾರ್ವತಮ್ಮನವರ ಎದೇಲಿ ಹುದುಗಿರೋ ವೇದಾಂತನ ಹೊಡಿದೆಬ್ಬಿಸಿತು. ''ಬರ್‍ತಾನೆ ಏನು? ಬಂದೇ ಬರ್‍ತಾನೆ! ಅದಕ್ಕೆ ನಾನು ಯಾವಾಗ್ಲೂ ರೆಡಿ!'' ಎಂದರು ಪಾರ್ವತಮ್ಮ.

''ನಾನಂತೂ ರೆಡಿಯಿಲ್ಲಪ್ಪಾ! ಅಯ್ಯೋ ಜೀವನದಲ್ಲಿ ಮಾಡೋದು, ಅನುಭವಿಸುವುದು ಇನ್ನೂ ಎಷ್ಟೋಂದಿದೆ!'' ಎಂದು ಉದ್ಗರಿಸಿದಳು ಪದ್ದಮ್ಮ.

ಪಾರ್ವತಮ್ಮನವರಿಗೆ ಹೊಸ ಚೇತನ ಬಂದ ಹಾಗಾಯಿತು. ''ಅದಕ್ಕೆ ನೋಡಿ ಹೇಳುವುದು! ಸಾಮಾನ್ಯವಾಗಿ ಮನುಷ್ಯರಿಗೆ ಆಶೆ ಕಳೆಯೋದು ಕಷ್ಟ ಅಂತ. ಶ್ರೀ ಶಂಕರರು ಹೇಳಿಲ್ವೆ! ದಿನಯಾಮಿನ್ಯೌ ಸಾಯಂ ಪ್ರಾತಃ, ಶಶಿರ ವಸಂತೌ ಪುನರಾಯಾತಃ! ಕಾಲಃ ಕ್ರೀಡತಿ ಗಚ್ಛತ್ಯಾಯುಃ, ತದಪಿ ನ ಮುಂಚತ್ಯಾಶಾವಾಯುಃ!! ಅದೇನಮ್ಮ! ಕಾಲಕ್ಕಾಟ! ಕಳೆಯುವುದಾಯು! ಜೀವವಿದಾಶೆಯ ಬಿಡದೆಂದೂ!'' ಬೋಧೆ ನಡೆಯಿತು.

ಪದ್ದಮ್ಮ ಸಾಮಾನ್ಯದ ಹೆಂಗಸೆ? ಮಹಾ ತಿಳುವಳಿಕೆಯಾಕೆ ಆಕೆ. ಅದಕ್ಕೆ ಮರು ಉತ್ತರವಾಗಿ ಈ ರೀತಿ ಉಲ್ಲೇಖಿಸಿದಳು: ''ಮೃತ್ಯುವಿಂ ಭಯವೇಕೆ?

ದೇಶಾಂತರಕ್ಕೊಯ್ವ ಯಾತ್ರನಾತಂ; ಚಿತ್ರಹೊಸದಿರ್ಪುದಲ್ಲಿ; ಸಾತ್ವಿಕದಿ ಬಾಳ್ವವಂಗೆತ್ತಲೇಂ ಭಯವಿಹುದು? ಸತ್ರ ಹೊಸದಿಹುದು ನಡೆ - ಮಂಕುತಿಮ್ಮ.''

ಪಾರ್ವತಮ್ಮನವರು ನಿರುತ್ತರರಾದರು. ಕೆಲಸದ ಕೂಗು ಕರೆಯುತ್ತಿತ್ತು. ''ನಾನಿನ್ನು ಬರ್ತೀನಿ. ತುಂಬಾ ಕೆಲಸ ಇದೆ.'' ಅಂತ ಹೇಳಿ ಮುಂದೆ ಹೊರಟರು. ಇಂತು ನೆರೆಹೊರೆಯವರ ಸಮಾಗಮ ಮುಕ್ತಾಯವಾಯಿತು. ಸರ್ವಮ್ ಶಿವಂ.



ರಾತ್ರಿ ಹಾಲು, ಬೆಳಗ್ಗೆ ಕಾಯ್ಸೋವಾಗ ಉಕ್ಕೋಯ್ತು.
ಇನ್ನೊಂದರ್ಧ ಕೊಟ್ಬಿಡಣ್ಣ. ಅಮ್ಮೋರ್ಗೆ ಹೇಳ್ಬೇಡ.

ಮನೆಯಲೊಂದಜ್ಜಿ!

• *ಹೆಚ್. ಗೋಪಾಲಕೃಷ್ಣ*

ನಮ್ಮ ದಾಸಾಲುಕುಂಟೆ ಅಜ್ಜಿ ವಿಷಯ ನಿಮಗೆ ಏನೂ ಹೇಳಿಲ್ಲ ಅಂತ ನನಗೆ ಗೊತ್ತು. ಏಕೆಂದರೆ ಈ ನಮ್ಮಜ್ಜಿ ನಮ್ಮ ನಿಮ್ಮಂತಹ ಸಾಧು ಸ್ವಭಾವದವಳು. ಹಿಂದೆ ಬಂದರೆ ಹಾಯದ ಮುಂದೆ ಬಂದರೆ ಒದೆಯದ ಪಕ್ಕಕ್ಕೆ ಬಂದರೆ ದಬ್ಬದ ಗೋ ಸ್ವರೂಪಿ. ಇನ್ನೂ ಹೇಳಬೇಕೂಂದರೆ ಎಲ್ಲರನ್ನೂ ಕಂಡು ಸುಖ ಸಂತೋಷದಿಂದ ಇರಿ ಅಂತ ಹರಸುವ ಜಾಯಮಾನದವಳು. ಇಂತಹ ಸಜ್ಜನಿ ಮೇಲೆ ಹೇಳುವಂತಹ ವಿಷಯ ಅದೇನಿರುತ್ತೆ ಅಂತ ನಿಮಗೆ ಈ ತನಕ ಈ ಅಜ್ಜಿ ವಿಷಯ ತಿಳಿಸಿಲ್ಲ (ಭಾಷಾ ಶಾಸ್ತ್ರಿಗಳು ಕ್ಷಮಿಸಿ, ಸಜ್ಜನಕ್ಕೆ ಸ್ತ್ರೀಲಿಂಗ ಸಜ್ಜನಿ).

ಈ ಅಜ್ಜಿಗೆ ನಮ್ಮ ಕುಟುಂಬದಲ್ಲಿ ದಾಸಾಲುಕುಂಟೆ ಅಜ್ಜಿ ಅಂತ ಹೆಸರು ಯಾಕೆ ಬಂತು ಗೊತ್ತೇ? ಮೊದಲು ಒಂದೇ ಅಜ್ಜಿ ಇದ್ದಾಗ ಇವರು ಬರೀ ಅಜ್ಜಿ ಅಂತ ಅನಿಸಿಕೊಂಡಿದ್ದರು. ಮನೇಲಿ ಮೊಮ್ಮಕ್ಕಳು ಜಾಸ್ತಿ ಆಗುತ್ತಿದ್ದ ಹಾಗೆ ಮಿಕ್ಕ ಅಜ್ಜಿಗಳೂ ಹುಟ್ಟಿಕೊಂಡರು. ಆಗ ಒಂದಜ್ಜಿಗೂ ಮತ್ತೊಂದು ಅಜ್ಜಿಗೂ ಗುರುತು ಹಿಡಿಯೋಕ್ಕೆ ಅಂತ ಬೇರೆ ಬೇರೆ ಹೆಸರಿನ ಅಜ್ಜಿಗಳು ಹುಟ್ಟಿದ್ದು. ಆಗ ಈ ಅಜ್ಜಿ ದಾಸಾಲು ಕುಂಟೆ ಅಜ್ಜಿ ಆದರೆ ಇನ್ನೊಂದು ಅಜ್ಜಿ ಹರೇಸಮುದ್ರದ ಅಜ್ಜಿ ಆಯಿತು ಮತ್ತೊಂದು ಭೀಮಸಾಗರದ ಅಜ್ಜಿ ಆಯಿತು. ಈ ಎಲ್ಲಾ ಅಜ್ಜಿಗಳಲ್ಲೂ ಈ ದಾಸಾಲುಕುಂಟೆ ಅಜ್ಜಿ ಅಂದರೆ ನಮಗೆಲ್ಲರಿಗೂ ಅಚ್ಚುಮೆಚ್ಚು. ಅಚ್ಚಮ್ಮಜ್ಜಿ ಅಂತ ಅಜ್ಜಿ ಹೆಸರಿದ್ದರೂ ಅವಳನ್ನ ಎಲ್ಲರೂ ದಾಸಾಲುಕುಂಟೆ ಅಜ್ಜಿ ಅಂತ ಕರೆಯೋದು. ಇದಕ್ಕೆ ಮತ್ತೊಂದು ಕಾರಣ ಅಂದರೆ ಈ ಅಜ್ಜಿ ತವರೂರು ದಾಸಾಲುಕುಂಟೆ ಅಂತೆ. ಈಗ ಬೆಂಗಳೂರಿನಲ್ಲೇ ನೆಲೆಸಿರೋ ಈ ಅಜ್ಜಿ ಮಿಕ್ಕ ಅಜ್ಜಿಗಳಿಗಿಂತ ಭಿನ್ನವಾಗಿರೋರು. ಭಿನ್ನ ಹೇಗೆಂದರೆ ಸೊಸೇರನ್ನ ಗೋಳು ಹೊಯ್ಕೊಂಡವರಲ್ಲ ಅಂತ. ನಾಲ್ಕು ಜನ ಮಕ್ಕಳು ಅವರ ಹೆಂಡತೀರು ಅವರ ಮಕ್ಕಳುಗಳ ಸಂಗತ ಈ ಅಜ್ಜೀದು ಒಂದೇ ಒಂಚೂರು ಕಿರಿಕಿರಿ ಇಲ್ಲ ಅಂಬೋದು ಅಜ್ಜಿಯ ಪ್ಲಸ್‌ಪಾಯಿಂಟು. ಮತ್ತೊಂದು ಪ್ಲಸ್ ಪಾಯಿಂಟು ಅಂದರೆ ಅಜ್ಜಿಯ ತಲೆಯಲ್ಲಿನ ವಿಷಯಗಳು ನರಸಿಂಹಯ್ಯನವರ ಪತ್ತೇದಾರಿ ಪುಸ್ತಕದಿಂದ ಹಿಡಿದು ತೀರ ಈಚಿಗೆ ಅಜ್ಜಿಮೊಮ್ಮಗ ಬರೆದಂತಹ ಮಿಡಲ್ ಲೇಖನಗಳ ಬಗೆಗೂ ಅಜ್ಜಿಗೆ ಅಗಾಧ ಪಾಂಡಿತ್ಯ. ಜಗತ್ತಿನಲ್ಲಿ ನಡೀತಿರೋ ಸಂಗತಿಗಳ ಬಗೆಗೆ ಈಕೆಗೆ ಫಸ್ಟ್‌ಹ್ಯಾಂಡ್ ಇನ್‌ಫರ್ಮೇಷನ್ ಇದೆ ಅಂತ ತಿಳ್ಕೊಳ್ಳಕ್ಕೆ ಒಂದೆರಡು ಸಂಗತಿಗಳು ಸಾಕು. ಅಮೇರಿಕಾದ ಪಾಕಿಸ್ತಾನದ ನಂಟಿನ ಒಳ

ಪಗರಣ ಈಕೆಗೆ ಗೊತ್ತು. ಅಮೇರಿಕಾದವರು ನಮ್ಮ ಬಾಸುಮತಿ ಅಕ್ಕೀನ ತಮ್ಮದು ಅಂತ ಹೇಳಿ ಪೇಟೆಂಟು ಮಾಡಿಸಿದ್ದು ಈಕೆಗೆ ಗೊತ್ತು. ನರಸಿಂಹಯ್ಯನವರ ಪತ್ತೇದಾರಿಯ ಕೃತಿಚೌರ್ಯ ನಡೆಸಿದವರ ವಿವರ ಸಹ ಈ ಅಜ್ಜಿಗೆ ಗೊತ್ತು!

ಬೆಳಕು ಹರಿದ ಕೂಡಲೇ ಒಂದು ಶಾಲು ಹೊದ್ದು ಅಜ್ಜಿ ಅಂಗಳಕ್ಕೆ ಬಂದು ಕೂರುತ್ತೆ. ಮನೆಗೆ ಬರುವ ಮೂರೂ ಕನ್ನಡ ಪತ್ರಿಕೆಗಳು ಪಕ್ಕದಲ್ಲಿರುತ್ತೆ. ಒಂದೊಂದೇ ಪತ್ರಿಕೆಯನ್ನ ಮೊದಲಿನಿಂದ ಕೊನೆವರೆಗೆ ಓದಿ ನಂತರ ಪಕ್ಕದಲ್ಲಿಟ್ಟು 'ದೇವರೇ ಈ ದೇಶವನ್ನು ನೀನೇ ಕಾಪಾಡಬೇಕು' ಅಂತ ಮೇಲಿರುವ ದೇವರಿಗೆ ಕೈಮುಗಿದು ನಂತರ ಅಜ್ಜಿ ಸ್ನಾನಕ್ಕೆ ಹೊರಡುತ್ತೆ. ಈ ವೇಳೆಗೆ ಆಗಲೇ ಆರು ಲೋಟ ಬಿಸಿ ಬಿಸಿ ಕಾಫಿ ಸರಬರಾಜು ಆಗಿರುತ್ತೆ. ಶಾಲೆಗೆ ಹೊರಡುವ ಮಕ್ಕಳು 'ಅಜ್ಜಿ ಬರ್ತೀವಿ' ಅಂತ ಹೇಳಿ ಹೊರಟಿರುತ್ತವೆ - ಕೆಲಸಕ್ಕೆ ಹೋಗುವ ಮಕ್ಕಳು 'ಅಮ್ಮಾ ಹೊರಟೆವು' ಅಂತ ಹೇಳಿ ಹೊರಟಿರುತ್ತವೆ. ತರಕಾರಿಗೆ ಅಂತ ಹೊರಟ ಸೊಸೆ 'ಅಮ್ಮಾ ತರಕಾರಿ ತರ್ತೀನಿ' ಅಂತ ಹೊರಟಿದ್ದರೆ ಬ್ಯಾಂಕಿನಿಂದ ಕಾಸು ತರಲು ಹೊರಟ ಸೊಸೆ 'ಅಮ್ಮಾ ಬ್ಯಾಂಕಿನ ಪತ್ತಿರ ಹೋಗಿದ್ದು ಬರ್ತೀನಿ' ಅಂತ ಹೇಳಿ ಹೋಗಿರುತ್ತಾಳೆ. ಒಳಗೆ ಅಡಿಗೆ ಕೆಲಸ ನೋಡಿಕೊಳ್ಳುವ ಸೊಸೆ ಆಗಿಂದಾಗ್ಗೆ ಆಚೆ ಬಂದು ಅಮ್ಮ ನೋಡಿ ಇಷ್ಟು ಮೆಂತ್ಯ ಹುರೀಲೇ, ಇಷ್ಟು ಬೇಳೆ ಹಾಕಿದರೆ ಸಾಕೇ, ನಿನ್ನೆ ಹುಳಿಗೆ ಖಾರ ಜಾಸ್ತಿ ಅಂತ ನಿಮ್ಮಗ ಹೇಳ್ತಿದ್ದರು. ಇವತ್ತು ನಾಲ್ಕು ಮೆಣಸಿನ ಕಾಯಿ ಕಡಿಮೆ ಹಾಕಲೇ, ತೊವ್ವೆಗೆ ಸಂಗಡ ಬಾಳಕ ಕರೀಲೋ ಅಥವಾ ಸಂಡಿಗೆ ಕರೀಲೋ, ಉಪ್ಪಿನಕಾಯಿ ತೆಗೀಬೇಕೇ... ಅಂತ ಕೇಳುತ್ತಾಳೆ. ಇವುಗಳ ಸಂಗಡ ಆಚೀಚೆ ಮನೆಯವರು ಅಜ್ಜಿ ಸಂಗಡ ಮಾತಾಡಲು ಬರುವುದುಂಟು.

'ಅಜ್ಜಿ ರಾತ್ರಿ ಎಲ್ಲಾ ಮಗು ಅಳ್ತಾಲೇ ಇತ್ತು. ಒಂದ್ನಿಮಿಷ ನಿದ್ದೆ ಕೊಟ್ಟಿಲ್ಲ.' ಹೌದೇನೇ ತಾಯೀ ರಾತ್ರೀನೇ ಬಂದು ಎಬ್ಬಿಸೋಕಿಲ್ಲವಾ. ವಿಳ್ಳೇದೆಲೆ ಮೇಲೆ ತೆಳ್ಳಗೆ ಹರಳೆಣ್ಣೆ ಸವರಿ ಅದನ್ನು ಉಗುರುಬೆಚ್ಚಗೆ ಮಾಡಿ ಹೊಟ್ಟೆಮೇಲೆ ಒಂದೆರೆಡು ಸಾರಿ ಹಾಗೇ ಹೀಗೇ ಸವರು. ಪಾಪ ಅಜೀರ್ಣವೇನೋ ಸರಿಹೋಗುತ್ತೆ.

'ಅಜ್ಜಿ ಮಗೂಗೆ ಎರಡು ದಿವಸದಿಂದ ತುಂಬಾ ನೆಗಡಿ ತುಂಬಾ ಕಫ ಸೇರಿದೆ ಅಂತ ಕಾಣುತ್ತೆ...'

'ಡಾಕ್ಟರಿಗೆ ತೋರಿಸಿದೆಯಾ?'

'ಇಲ್ಲಜ್ಜೀ ತಿಂಗಳ ಕೊನೆ ಅಲ್ಲವಾ ಕೈಲಿ ಕಾಸಿಲ್ಲ...'

'ಹಾಗಿದ್ದರೆ ಒಂದು ಕೆಲಸ ಮಾಡು ಮನೇಲಿ ಅರಿಶಿನ ಇದೆ ತಾನೇ? ಅರಿಶಿನ ಕೊಬ್ಬರಿ ಎಣ್ಣೆ ಕಲಸಿ ಬಿಸಿ ಮಾಡು. ಆರಿಸಿದ ನಂತರ ಮಗು ನೆತ್ತಿಗೆ ಪಟ್ಟುಹಾಕು. ನೆಗಡಿ ಇಳಿಯುತ್ತೆ. ಎದೇಲಿ ಕಫ ಇದ್ದರೆ ವಿಳೇದೆಲೆ ತುಳಸಿ ಅರೆದು ರಸ ತೆಗೆದು ಅದನ್ನ ಜೇನು ತುಪ್ಪದಲ್ಲಿ ನೆಕ್ಕಿಸು. ಮಗು ಹಠ ಮಾಡುತ್ತೆ ಅಂತ ಅದನ್ನ ಬೈದು ಹೊಡೆದು ಮಾಡಬೇಡ....'

'ಅಜ್ಜೀ ಎರಡು ದಿವಸದಿಂದ ಮಗು ಎರಡಕ್ಕೆ ಹೋಗಿಲ್ಲ. ಅದೇನೋ ಹಿಂಸೆ ಪಡ್ತಿದೆ....'

''ಮಗೂನ ಇಲ್ಲಿ ಕರಕೊಂಡು ಬಾರೇ ತಾಯೀ....'

ಮಗೂನ ತಾಯಿ ಕರಕೊಂಡು ಬರುತ್ತಾಳೆ. ಅದನ್ನ ಅಜ್ಜಿ ತೊಡೆಮೇಲೆ ಮಲಗಿಸಿಕೊಂಡು ಹೊಟ್ಟೆಯನ್ನು ಒಂದೆರಡು ಸಲ ಅದುಮಿ ಪರೀಕ್ಷಿಸುತ್ತಾಳೆ. 'ಒಂಚೂರು ಸೋಪು ತಗೊಂಡು ಬಾ' ಸೋಪು ಮನೆಯಿಂದ ಬರುತ್ತೆ. ಸೋಪನ್ನ ಮಗೂಗೆ ಇರಿಸಿ ಭೇದಿ ಮಾಡಿಸಿ ಹೂ ಸರಿ ಹೋಯಿತು. ಕರಕೊಂಡು ಹೋಗು ಅಂತ ಮಗೂಗೆ ನೆಟಿಗೆ ತೆಗೆದು ದೃಷ್ಟಿ ನೀವಾಳಿಸಿ ಕೊಡುತ್ತೆ ಅಜ್ಜಿ. ಸುತ್ತಮುತ್ತಲಿನ ಮನೆಯವರ ಚಿಕ್ಕಪುಟ್ಟ ಮಕ್ಕಳಿಗೆ ಎಂತದೇ ಖಾಯಿಲೆ ಬಂದರೂ ಮೊದಲ ವೈದ್ಯ ಈ ದಾಸಾಲ್ಕುಂಟೆ ಅಜ್ಜಿ. ಬರೀ ವೈದ್ಯಕ್ಕೇ ಈ ಅಜ್ಜಿ ಕೆಲಸ ನಿಲ್ಲದು. ಸುತ್ತ ಮುತ್ತಲಿನ ಮನೇಯವರ ಸಾಂಸಾರಿಕ ತಾಪತ್ರಯಗಳಿಗೂ ಈಕೆ ಬಳಿ ಪರಿಹಾರ ಇದೆ.

'ನಮ್ಮ ಕಿರೀ ಸೊಸೆ ನಮ್ಮ ಜತೆ ಇರುಲ್ಲ ಅಂತ ಹಠ ಹಿಡಿದಿದ್ದಾಳೆ. ಬೇರೆ ಮನೆ ನೋಡು ಅಂತ ಗಂಡಂಗೆ ಪೀಡಿಸ್ತಿದಾಳೆ ಅದೇನು ಮಾಡೋದೋ ತಿಳೀತಿಲ್ಲ...' ಅಂತ ಒಂದು ಸಮಸ್ಯೆನ ತೆಗೆದುಕೊಂಡು ಅಜ್ಜಿ ಹತ್ತಿರ ನಾಲ್ಕು ಮನೆ ಆಚೆಯ ಹೆಂಗಸು ಒಂದು ಸಲ ಬಂದಿತ್ತು.

'ಯಾಕೆ ಅಂತ ಕೇಳಿದಿಯೇನೇ ತಾಯಿ?'

'ಅದೇನೋ ಕಾಲೇಜು ಕಲಿತದ್ದು ಅದು. ಪ್ರೈವೇಸಿ ಬೇಕಂತೆ ಅದಕ್ಕೆ...' ಅಂತ ಅದರತ್ತೆ ಹೇಳಿದಳು.

'ಸೊಸೇನ ಇಲ್ಲೀಗೆ ಕಳಿಸು. ಹೇಳಿ ನೋಡ್ತೀನಿ...' ಅಂತ ಅಜ್ಜಿ ಹೇಳಿತು. ಗಂಟೆ ಬಿಟ್ಟು ಸೊಸೆ ಬಂದಳು. ಅತ್ತು ಅತ್ತು ಕೆಂಪಾಗಿದ್ದ ಕಣ್ಣುಗಳು, ಕಣ್ಣಲ್ಲೇನೋ ಒಂದು ರೀತಿ ದ್ವೇಷ ಹಠ ಜಿಗುಟು.

ಬಾ ತಾಯಿ ಕೂತ್ಕೋ ಹೇಗಿದ್ದೀ ಹೊಸಾಮನೆ ಅಲ್ಲವಾ ಕೊಂಚ ದಿವಸ ಬೇಕು ಹೊಂದಿಕೊಳ್ಳುಕ್ಕೆ. ಲೇ ಮಗೂ ಬಂದಿದೆ ಕಾಫಿ ಕೊಡ್ರೇ... ತಿಂಡಿ

ತಿಂದೆಯಮ್ಮಾ? ಇಲ್ಲವೇ? ಲೇ ಕೊಂಚ ಉಪ್ಪಿಟ್ಟೋ ದೋಸೇನೋ ಇದ್ದರೆ ತಂಗೊಂಡು ಬನ್ರೇ...' ಇದು ಮನೆ ಒಳಗಿನ ಸೊಸೆಯಂದಿರಿಗೆ ಹೇಳಿದ ಮಾತು.

ಸೊಸೆ ಉಪ್ಪಿಟ್ಟು ತಿನ್ನುತ್ತಿರಬೇಕಾದರೆ ಮೃದುವಾದ ಧ್ವನಿಯಲ್ಲಿ ಅತ್ತೆ ಮನೇಲಿ ಇವಳಿಗೆ ಅದೇನು ಹಿಂಸೆ ಆಗ್ತಿದೆ ಅಂತ ಸೊಸೇಗೆ ತಿಳಿಯದ ಹಾಗೆ ಈ ಅಜ್ಜಿ ತಿಳ್ಕೊಳ್ತಿತ್ತು. ಗಂಡನ ಸಂಗಡ ಸಂಜೆ ಆಚೆ ಹೋಗೋ ಹಾಗಿಲ್ಲ, ಗಂಡನ ಸಂಬಳವನ್ನ ಎಲ್ಲಾ ಮನೆಯವರೇ ತಗೊಂಡುಬಿಡ್ತಾರೆ ತನಗೊಂದು ಲಂಗಬೇಕೂಂದರೂ ತವರಿನವರನ್ನ ಕೇಳಬೇಕು. ರಾತ್ರಿ ಸರಿ ಹೊತ್ತಾದರೂ ಗಂಡನ ಜೊತೆ ರೂಮಿಗೆ ಸೇರುವ ಹಾಗಿಲ್ಲ ಇವೇ ತರಹದ ತರಹೇವಾರಿ ದೂರುಗಳು. ಸೊಸೆ ಮಾತು ಕೇಳಿ ಅದಕ್ಕೆ ತಕ್ಕ ಪರಿಹಾರ ಸೂಚಿಸಿ ಕೊನೆಗೆ ಬೇರೆ ಮನೆ ಮಾಡೋದು ದೊಡ್ಡದಲ್ಲವೇ ತಾಯಿ. ನಿನ್ನ ಗಂಡಂಗೆ ಈಗಿನ್ನೂ ಐದುನೂರು ಚಿಲ್ಲರೆ ಸಂಬಳ ಬರ್ತಿದೆ ಬೇರೆ ಮನೆ ಮಾಡಿದರೆ ನಿಮ್ಮ ಸಂಬಳ ಎಲ್ಲಾ ಮನೆ ಬಾಡಿಗೇಗೇ ಕೊಡಬೇಕಾಗುತ್ತೆ. ಆಮೇಲೆ ಹೊಟ್ಟೆಗೆ ಬಟ್ಟೆಗೆ ಅದೇನು ಮಾಡ್ತೀರೀ? ಒಂದೆರೆಡು ವರ್ಷ ಇಲ್ಲೇ ಇದ್ದು ಕೈಗೆ ಕೊಂಚ ದುಡ್ಡು ಸೇರಿಸ್ಕೋ. ಅಷ್ಟು ಹೊತ್ತಿಗೆ ನಿನ್ನ ಗಂಡಂಗೂ ಸಂಬಳ ಜಾಸ್ತಿ ಆಗಿರುತ್ತೆ. ಹೊಸಾಜಾಗ ಅಲ್ಲವಾ? ಅವರೂ ಒಂದು ತರಹ ಬೆಳೆದಿರ್ತಾರೆ. ನೀನೂ ಬೇರೆ ಕಡೆಯಿಂದ ಬಂದೋಳು. ಕೊಂಚ ದಿನ ಬೇಕು ಸರಿ ಹೊಂದಿಕೊಳ್ಳುಕ್ಕೆ. ನಿನ್ನ ಗಂಡನ್ನ ನಿನ್ನತ್ತೆ ಮನೇವ್ರು ಅದೆಷ್ಟು ಕಷ್ಟದಲ್ಲಿ ಪ್ರೀತಿಯಿಂದ ಬೆಳೆಸಿದಾರೆ ಗೊತ್ತಾ? ಇದ್ದಕ್ಕಿದ್ದ ಹಾಗೆ ರಾತ್ರಿ ಹೊತ್ತು ರಚ್ಚೆ ಶುರು ಮಾಡಿಬಿಡೋನು ನಿನ್ನ ಗಂಡ. ಇಡೀ ರಾತ್ರಿ ಗಂಡ ಹೆಂಡತಿ ನಿದ್ದೆಗೆಟ್ಟು ಅವನನ್ನ ನೋಡಿಕೊಳ್ತಾ ಇದ್ದರು. ಬೆಳಿಗ್ಗೆ ನಮ್ಮನೇಗೆ ಓಡಿ ಬರೋರು. ಅದೆಷ್ಟು ಸಲ ದೃಷ್ಟಿ ನೀವಾಳಿಸಿದೀನೋ ನಿನ್ನ ಯಜಮಾನಂಗೆ? ಈಗಲೂ ಹಾಗೇ ಹಠ ಮಾಡ್ತಾನೇನೇ? ಕೋಪ ಬಂದಾಗ ಮನೆ ಪಾತ್ರೆ ಪರಡಿ ಎಲ್ಲಾ ರಸ್ತೇಲಿ ತಂದು ಇಟ್ಟುಬಿಡ್ತಿದ್ದ. ಈಗಲೂ ಹಾಗೇ ಮಾಡ್ತಾನೇನೋ? ದಂಟು - ದೊಡ್ಡ ದೊಡ್ಡ ದಂಟಿನ ಮಜ್ಜಿಗೆ ಹುಳಿ ಅಂದರೆ ಪ್ರಾಣ ಅವನಿಗೆ. ಒಂದು ಸಲ ನಿಮ್ಮತ್ತೆ ದಂಟಿನ ಮಜ್ಜಿಗೆ ಹುಳಿ ಮಾಡಿದ್ದಳು. ಇವನು ಎರಡನೇ ಕ್ಲಾಸೋ ಏನೋ ಓದ್ತಿದ್ದ. ಬೆಳಿಗ್ಗೆ ಇವನು ಸ್ಕೂಲಿಗೆ ಹೊರಟಾಗ ನಿಮ್ಮತ್ತೆ ದಂಟು ಹೆಚ್ತಿರೋದನ್ನ ನೋಡಿದ್ದ. ಸ್ಕೂಲು ಮುಗಿಸಿಕೊಂಡು ಮನೇಗೆ ಬರ್ತಾನೆ. ದಾರೀಲೆಲ್ಲಾ ದಂಟಿನದ್ದೇ ಕನಸು ಇವನಿಗೆ. ಇವನು ಮನೇಗೆ ಬಂದು ಊಟಕ್ಕೆ ಕೂತ. ಮಜ್ಜಿಗೆ ಹುಳೀಲಿ ದಂಟು ಮುಗಿದುಹೋಗಿದೆ. ಅದೇನು ಆರ್ಭಟ ಮಾಡಿಬಿಟ್ಟ ಅಂತೀ? ಕೊನೇಗೆ ನಿಮ್ಮತ್ತೆ ಅವತ್ತು ನಮ್ಮ ಮನೆಗೆ ಬಂದು ದಂಟಿನ ಹೋಳು ತೆಗೆದುಕೊಂಡು ಹೋಗಿದ್ದಳು. ಇನ್ನೊಂದು ತಮಾಷೆ ಕತೆ ಗೊತ್ತೇನೇ ಹುಡುಗಿ ನಿನ್ನ ಗಂಡಂದು? ಒಂದು ಸಲ

ನಿಮ್ಮನೇಲಿ ನಿಮ್ಮತ್ತೆ, ನಿಮ್ಮಾವ, ನಿಮ್ಮ ಭಾವ ಎಲ್ಲರಿಗೂ ಟೈಫಾಡ್ ಬಂದಿತ್ತುಕಣೇ. ನಿನ್ನ ಗಂಡ ಒಬ್ಬನೇ ಹುಷಾರಿಂದ ಇದ್ದೋನು. ಸಾಯಂಕಾಲದವರೆಗೂ ನಿದ್ದೆ ಹೊಡೆದುಬಿಟ್ಟಿದ್ದ. ನಿಮ್ಮತ್ತೆ ಅವನನ್ನ ಎಬ್ಬಿಸಿ ಅರ್ಧ ಪೌಂಡು ಬ್ರೆಡ್ ತಗೊಂಡು ಬಾರೋ ಅಂದಳು. ಇವನು ನಿದ್ದೆ ಕಣ್ಣಲ್ಲಿ ನಾಲ್ಕಾಣೆ ಸಾಕಮ್ಮಾ ಅಂತ ನಾಲ್ಕಾಣೆ ತಗೊಂಡು ಓಡಿದ. ಬ್ರೆಡ್ ತರ್ತಾನೆ ಅಂತ ನಿಮ್ಮತ್ತೆ ಕಾಫಿ ಬಿಸಿ ಮಾಡಿಕೊಂಡು ಕಾಯ್ತಿದ್ದಾಳೆ. ಈ ಮಹಾರಾಯ ಒಂದೂವರೆ ಗಂಟೆ ಬಿಟ್ಕೊಂಡು ಬಂದ. ತಲೆ ಕ್ರಾಪ್ ಮಾಡಿಸಿಕೊಂಡಿದ್ದಾನೆ - ಅದೂ ಸಾಯಂಕಾಲ. ಕ್ರಾಪ್‌ಕಟ್‌ಗೆ ಹೋಗಬೇಕು ಅಂತ ಇದ್ದನಂತೆ. ನಿಮ್ಮತ್ತೆ ಎಬ್ಬಿಸಿದಾಗ ತಲೆ ತುಂಬ ಅದೇ ಯೋಚನೆಯಿತ್ತು. ಸಂಜೆ ಹೊತ್ತು ಬೇರೆ. ಬೆಳಗಿನ ಜಾವ ಅಂತ ಅಂದುಕೊಂಡು ಹೋಗಿ ಕ್ಷೌರ ಮಾಡಿಸಿಕೊಂಡು ಬಂದುಬಿಟ್ಟಿದ್ದ. ಆಮೇಲೆ ಅದೆಷ್ಟೋ ವರ್ಷ ಅವನನ್ನ ಏ ನಾಲ್ಕಾಣೆ ಅಂತಲೇ ನಮ್ಮ ರಸ್ತೆಯವರೆಲ್ಲಾ ಕೂಗ್ತಾ ಇದ್ದದ್ದು....' ಹೀಗೆ ಹಲವೇ ತೆರೆದ ತರಹೇವಾರಿ ಕತೆಗಳನ್ನ ಹೇಳಿ ಸೊಸೆಯಂದಿರನ್ನು 'ಸಾಪು' ಮಾಡಿ ಕಳಿಸುವ ಕತೆ ನಮ್ಮ ಅಜ್ಜಿಗೆ ಕರತಲಾಮಲಕ. ಅದೇ ರೀತಿ ಅತ್ತೆಯರಿಗೂ ಹಿತವಚನ ಹೇಳಿ ಅವರು ನೇರದಾರಿಗೆ ಬರುವಂತೆ ಮಾಡುವ ಚಾಣಾಕ್ಷತೆ ಈ ಅಜ್ಜಿಯದು.


ಹಸೆಮಣೆ ಹಾಡು ರಂಗೋಲಿ ಹಾಡು ಆರತಿ ಹಾಡು ಇವನ್ನೆಲ್ಲಾ ಅಜ್ಜಿ ಹೇಳುವುದನ್ನ ಕೇಳುವುದೇ ಒಂದು ಸೊಗಸು. 'ಯಾರೇ ರಂಗನ ಕರೆಯಬಂದವರು' ಎಂಬ ದಾಸರ ಪದವನ್ನು ಅಜ್ಜಿ ಹೇಳಬೇಕಾದರೆ ಕೃಷ್ಣ ಬಂದು ನಮ್ಮ ಕಣ್ಣಮುಂದೆ ಕುಣೀತಿದ್ದಾನೆ ಅಂತ ಅನಿಸುತ್ತಿತ್ತು. ಅದೇ ರೀತಿ ದಾಸರ ಹಲವಾರು ಪದಗಳು ನನಗೆ ಪರಿಚಯ ಆಗಿದ್ದು ಈ ಅಜ್ಜಿ ಮೂಲಕ. ದಾಸರ ಪದದ ಸಂಗಡ ಮೀರಾಭಜನೆ ಕೇಳಿ ಬಸವಣ್ಣನ ವಚನ ಕೇಳಿ ಈಕೆ ಬಾಯಲ್ಲಿ ಸರಿಸಲೀಸಾಗಿ ಹರಿದುಬರುತ್ತೆ ಈಗಲೂ.


ಜೀವನದ ಸಂಜೆಯಲ್ಲಿರುವ ಅಜ್ಜಿ ಕಷ್ಟ ಕಾರ್ಪಣ್ಯ ಅನುಭವಿಸೇ ಇಲ್ಲವೇ ಅಂತ ಕೇಳ್ತೀರೇನೋ. ಭಾರೀ ಕಷ್ಟಗಳನ್ನೇ ಅನುಭವಿಸಿದ ಹೆಂಗಸು ಈಕೆ. ತಾತ ತರುತ್ತಿದ್ದ ಪುಡಿಗಾಸಿನಲ್ಲಿ ಸಂಸಾರವನ್ನ ಹೇಗೆ ನಿಭಾಯಿಸುತ್ತಿದ್ದಳು ಎಂದು ನಮಗೆ ಗೊತ್ತು. ಎರಡು ಸೇರು ಅಕ್ಕಿಯ ಅನ್ನ ಒಂದು ತಪ್ಪಲೆಯಲ್ಲಿ ಮತ್ತೊಂದು ಕೊಳದಪ್ಪಲೆಯಲ್ಲಿ ಗಟ್ಟಿ ಬೇಳೆ ಹುಳಿ ಬೆಳಿಗ್ಗೆ ಎಂಟಕ್ಕೆ ರೆಡಿ. ಮಕ್ಕಳು ಹಸಿವು ಎಂದಾಗಲೆಲ್ಲಾ ಕೈತುತ್ತು ಹಾಕಿ ರಮಿಸುತ್ತಿತ್ತು. ಪುಡಿಗಾಸಿನ ಸಂಬಳದಲ್ಲೇ ಬಿಡಿ ಕಾಸು ಕೂಡಿಸಿ ಒಂದು ಕಾಸಿನ ಸರ ಮಾಡಿಸಿಕೊಂಡಿತ್ತು. ಸವರನ್‌ಗೆ ಹದಿನೆಂಟು ರೂಪಾಯಿ ಬೆಲೆ ಇದ್ದ ಕಾಲದಲ್ಲಿ. ಈಗಲೂ ಆ ಕಾಸಿನ ಸರವನ್ನು ಜೋಪಾನದಿಂದ ಕಾಪಾಡಿಕೊಂಡು ಬಂದಿದ್ದಾಳೆ ಅಜ್ಜಿ. ಗಂಡ ಬೆಂಗಳೂರಿನಲ್ಲಿ

ಕೆಲಸ. ಹೆಂಡತಿ ಬೆಂಗಳೂರಿನಿಂದ ಅದೆಷ್ಟೋ ನೂರು ಮೈಲಿ ದೂರದ ಹಳ್ಳೀಲಿ. ತಿಂಗಳಿಗೊಮ್ಮೆ ಬಂದು ಗಂಡನಿಂದ ಸಂಬಳ ವಸೂಲಿ ಮಾಡಿಕೊಂಡು ಹೆಣಗಿದ್ದಾಳೆ. ಮೊದಲಿಂದಲೂ ಅಕ್ಕಪಕ್ಕದವರಿಗೆ ತನ್ನ ಸಹಾಯ ಹಸ್ತ ಚಾಚುತ್ತಲೇ ಇರುವ ಅಜ್ಜಿಯ ಕೈಲಿ ಸ್ನಾನ ಮಾಡಿಸಿಕೊಂಡಿರದ ಮಕ್ಕಳು ನಮ್ಮ ರಸ್ತೆಯಲ್ಲಿ ಇಲ್ಲ ಎಂದೇ ಹೇಳಬೇಕು. ರಜ್ಜೆ ಒಡಿದ ಮಕ್ಕಳಿಗೆ ಬಳೆ ಮುರಿದು ಅದನ್ನ ಕಾಯಿಸಿ 'ಚುಟುಕೆ' ಹಾಕುವುದರಲ್ಲಿಯೂ ಎಜ್ಜಿ ಎಕ್ಸ್‌ಪರ್ಟ್ ಎನಿಸಿದ್ದಳು. ಅದನ್ನು ಮಕ್ಕಳು ಬಿಡಿಸಿದ್ದು ಒಂದು ದೊಡ್ಡ ಕತೆ. 'ಮಕ್ಕಳಿಗೆ ಈ ರೀತಿ ಸುಡಬೇಡ' ಅಂತ ಬೆಳೆದ ಮಕ್ಕಳು ಒಮ್ಮೆ ಒಟ್ಟಿಗೆ ವರಾತ ತೆಗೆದರಂತೆ. ಯಾವುದಾದರೂ ಮಗು ನಿನ್ನ ಈ ರಣವೈದ್ಯಕ್ಕೆ ಗೊಟಕ್ ಅನ್ನಲಿ. ಆಗ ಪೋಲಿಸ್ನೋರು ಬಂದು ನಿನ್ನನ್ನು ಎಳಕೊಂಡು ಹೋಗಿ ಜೈಲಿಗೆ ಹಾಕ್ತಾರೆ...' ಅಂತ ಹೆದರಿಸಿ ಹೆದರಿಸಿ ಈ ಚುಟುಕದ ವೈದ್ಯ ಬಿಡಿಸಿದರಂತೆ.

ಅಜ್ಜಿಯ ರಣವೈದ್ಯ ಅಂದರೆ ಮತ್ತೊಂದು ನೆನಪಿಗೆ ಬರುತ್ತೆ. ಹನುಮನ ಮಗಳು ರಮಾ ಅಂತ ಗೊತ್ತಿದೆ ತಾನೇ. ರಮಾ ಹುಟ್ಟಿದಾಗ ಅದಕ್ಕೆ ಒಂಥರಾ ಚರ್ಮದ ಅಲರ್ಜಿ ಯಾವಾಗಲೂ ನವೆ ನವೆ ನವೆ... ಒಂದು ತಿಂಗಳ ಕೂಸೇ ಮುಖ ಪರಚಿಕೊಂಡು ಪರಚಿಕೊಂಡು ರಕ್ತ ಸುರಿಸುತ್ತಿತ್ತು. ಯಾವ ವೈದ್ಯರ ಪ್ರಯೋಗವೂ ಸರಿ ಹೋಗಲಿಲ್ಲ. ಮಗು ಕೈಗೆ ಬಟ್ಟೆಚೀಲ ಹಾಕಿ ಕಟ್ಟಿ ಅದು ಮುಖ ಪರಚಿಕೊಳ್ಳದೇ ಇರೋತರ ನೋಡಿಕೊಳ್ಳೋ ಹೊತ್ತಿಗೆ ಅದರ ಅಪ್ಪ ಅಮ್ಮ ಸುಸ್ತು ಹೊಡೀತಿದ್ದರು. ಅಜ್ಜಿ ಇದರ ಪಾಡು ನೋಡಿದಳು. ಅದೇನೋ ಸೊಪ್ಪು ಬೇರು, ತೈಲ ತಂದಳು ದೊಡ್ಡ ಬಾಂಡಲೀಲಿ ಅದನ್ನ ಹುರಿದು, ಕರಿದು ಪುಡಿ ಮಾಡಿ ಒಂಥರ ಕರೀ ಔಷಧ ತಯಾರಿಸಿದಳು. ಮಗು ಮುಖಕ್ಕೆ ಮೈಗೆ ಇದನ್ನ ಬಳಿದ ಎರಡು ತಿಂಗಳು ನೋಡಿಕೊಂಡಳು. ಮಗು ಈ ಕಪ್ಪು ಔಷಧ ಹಚ್ಚಿಕೊಂಡು ಒಂಥರಾ ವಿಕಾರವಾಗಿ ಬೇಬಿ ರಾಕ್ಷಸಿತರಹ ಕಾಣಿಸ್ತಿತ್ತು. ಆದರೆ ಈ ನವೆ ರೋಗ ವಾಸಿ ಆದ ನಂತರ ಮಗು ಹೇಗಾಯಿತು ಅಂತೀರಿ? ಈಗ ಅದೇ ರಮಾಳಿಗೆ ಮತ್ತೊಂದು ಮಗು. ಆಗಾಗ ಅಜ್ಜೀನ ನೋಡುಕ್ಕೆ ಇವರ ಸವಾರಿ ಬರ್ತಿರುತ್ತೆ.

ಎಲ್ಲರ ಮನೆ ಅಜ್ಜಿಗಳ ತರಹ ಇದರದ್ದೂ ಕಿರಿಕಿರಿ ಪಿರಿಪಿರಿ ಇಲ್ಲವೇ? ಇದೆ, ಆದರೆ ಅದು ಅಜ್ಜಿಯ ಮತ್ತೊಂದು ಮುಖ ಅಷ್ಟೇ. ಮನೆಯಲ್ಲಿ ಅಜ್ಜಿಯೊಂದಿರಲಿ ಎಂದು ಕನ್ನಡದ ಕವಿ ಹಾಡಿದ್ದಾನೋ ಇಲ್ಲವೋ ತಿಳಿಯದು. ಆದರೆ ಮನೆಯಲ್ಲಿ ಒಂದೇ ಒಂದು ಅಜ್ಜಿ ಇದ್ದರೆ ಅಂತಹ ಸ್ವರ್ಗ ಸಮಾನವ ಮನೆ ಬೇರೊಂದು ಖಂಡಿತ ಇಲ್ಲ ಎಂದು ನನ್ನ ಅಭಿಮತ! ಮನೆಯಲೊಂದು ಅಜ್ಜಿ ಇರಲೇಬೇಕು.




AMBUTHIRTHA
POWER PRIVATE LIMITED
2ND FLOOR, 21/19, CRAIG PARK ROAD
M.G.ROAD CROSS, BANGALORE-560 001, INDIA
TEL:91-80-5597616/5599654/5595315.FAX:91-80-5597617
e-mail: suchind@giasbg01.vsnl.net.in

Reg.No.: CPMG/KA/BGW-544/2002

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR